**ಸಾರಿಗೆ ಸಚಿವರು,**
**ಕರ್ನಾಟಕ ಸರ್ಕಾರ**

# <u>ಸಂದೇಶ</u>

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, ಒಂದು ಬೃಹತ್ ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು, ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸುವುದು ಸಂಸ್ಥೆಯ ಆದ್ಯ ಕರ್ತವ್ಯವಾಗಿದೆ.

ಸಾರ್ವಜನಿಕ ನಿರೀಕ್ಷೆಗೆ ಹಾಗೂ ಬೇಡಿಕೆಗಳಗೆ ತಕ್ಕಂತೆ ಪರಿಣಾಮಕಾರಿಯಾಗಿ ಸಂಸ್ಥೆಯು ಸ್ಪಂದಿಸುವುದಲ್ಲದೆ, ಚಾಲಕರು, ನಿರ್ವಾಹಕರು ಹಾಗೂ ಸಂಸ್ಥೆಯ ಇತರೇ ಸಿಬ್ಬಂದಿಗಳು ಸೌಜನ್ಯತೆಯಿಂದ ಪ್ರಯಾಣಿಕರೊಂದಿಗೆ ವರ್ತಿಸುವುದು ಬಹಳ ಮುಖ್ಯವಾಗಿರುತ್ತದೆ.

ರಾಜ್ಯ ಸರ್ಕಾರವು ಸಾರ್ವಜನಿಕರಿಗೆ ಉಪಯುಕ್ತಕರವಾದಂತಹ ಸೌಕರ್ಯಗಳನ್ನು ಕಲ್ಪಿಸುವ ದಿಸೆಯಲ್ಲಿ ಗುರುತರವಾದ ಮತ್ತು ಜವಾಬ್ದಾರಿಯುತವಾದ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಸರ್ಕಾರದ ಪ್ರತಿಯೊಂದು ಅಂಗ ಸಂಸ್ಥೆಯಲ್ಲಿ ಒಂದು ನಾಗರಿಕ ಸನ್ನದ್ದನ್ನು ತಯಾರಿಸಿ ಸಾರ್ವಜನಿಕರು ಆಯಾ ಸಂಸ್ಥೆಗಳಂದ ಯಾವ ವಿದಧ್ ಸೇವಾ ಸೌಕರ್ಯಗಳನ್ನು ಪಡೆಯಬಹುದಾಗಿದೆ ಎಂಬುದನ್ನು ಗುರುತಿಸಿ ನಮೂದಿಸುವ ಪ್ರಸ್ತಾವನೆಯನ್ನು ನಾನು ಉತ್ತೇಜಿಸುತ್ತೇನೆ. ಸಾರ್ವಜನಿಕರು ತಾವು ಸಂದಾಯ ಮಾಡುವ ಹಣಕ್ಕೆ, ಯಾವ ಯಾವ ರೀತಿಯ ಸೇವಾ ಸೌಕರ್ಯಗಳನ್ನು ಪಡೆದುಕೊಳ್ಳುತ್ತಾರೆಂಬುದರ ಬಗ್ಗೆ ಅರಿತುಕೊಳ್ಳುವ ಹಕ್ಕು ಉಳ್ಳವರಾಗಿರುತ್ತಾರೆ.

ಸಾರ್ವಜನಿಕ ಪ್ರಯಾಣಿಕರಿಗೆ ಸಂಸ್ಥೆಯಿಂದ ಒದಗಿಸುವ ವಿವಿಧ ರೀತಿಯ ಸೇವೆಗಳು ಸೌಕರ್ಯಗಳು ಹಾಗೂ ಪ್ರಯಾಣಿಕರ ಕುಂದು-ಕೊರತೆಗಳನ್ನು ನಿವಾರಿಸಲು ಹಾಕಿಕೊಂಡಿರುವಂತಹ ಯೋಜನೆ ಮತ್ತು ಪರಿಹಾರ ಕ್ರಮಗಳ ಮಾಹಿತಿಯನ್ನು ಒಳಗೊಂಡಿರುವ "ನಾಗರಿಕ ಸನ್ನದ್ದನ್ನು" ಮರು ಪ್ರಕಟಿಸುತ್ತಿರುವುದು ಬಹಳ ಸಂತೋಷದ ವಿಷಯ.

ಈ.ಕ.ರ.ಸಾ.ಸಂಸ್ಥೆಯು "ನಾಗರಿಕ ಸನ್ನದ್ದು" ಸಾರ್ವಜನಿಕ ಸೇವೆಗಳಗೆ ಮೀಸಲಿರುವಂತಹ ಇತರೇ ಸಾರ್ವಜನಿಕ ಸಂಸ್ಥೆಗಳಗೆ ಒಂದು ಮಾದರಿಯಾಗಲಿ ಎಂದು ಆಶಿಸುತ್ತೇನೆ.

**ಪ್ರಧಾನ ಕಾರ್ಯದರ್ಶಿಗಳು,**
**ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ**

# ಸಂದೇಶ

ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ಸ್ಥಾಪಿತವಾದ ಸಾರಿಗೆ ಸಂಸ್ಥೆಗಳು ಸಾರ್ವಜನಿಕ ಪ್ರಯಾಣಿಕರಿಗೆ ಸಮರ್ಪಕ, ಪರಿಣಾಮಕಾರಿ, ಸುರಕ್ಷಿತ್ ಹಾಗೂ ಆರ್ಥಿಕವಾಗಿ ಮಿತವ್ಯಯ ಸಾರಿಗೆ ಸೌಲಭ್ಯ ಒದಗಿಸಲು ಬದ್ಧವಾಗಿರುತ್ತದೆ.

ಸಾರಿಗೆ ಕ್ಷೇತ್ರದಲ್ಲಿ ಖಾಸಗಿಯವರ ತೀವ್ರ ಪೈಪೋಟಿಯಿದ್ದು, ಈ.ಕ.ರ.ಸಾ.ಸಂಸ್ಥೆಯು ಇವರೊಡನೆ ಪೈಪೋಟಿ ನೀಡಿ ಸಾರ್ವಜನಿಕ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯ ನೀಡುವ ಹಿತದೃಷ್ಟಿಯಿಂದ ವಿವಿಧ ಮಾದರಿ ವಾಹನಗಳಾದ ಕರೋನಾ ಎ. ಸಿ. ಸ್ಲೀಪರ್, ರಾಜಹಂಸ ಮತ್ತು ಬ್ರ್ಯಾಂಡೆಡ ಸೇವೆಗಳನ್ನು ಆಕರ್ಷಕ ಪ್ರೋತ್ಸಾಹಕ ದರಗಳೊಂದಿಗೆ ಕಾರ್ಯಾಚರಣೆ ಮಾಡುತ್ತಿವೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, ತನ್ನ ಪ್ರಯಾಣಿಕರಿಗೆ ಉತ್ತಮ ಸೇವೆ ನೀಡಲು ಅಂತರ ಜಾಲದ ಮೂಲಕ ಮುಂಗಡ ಆಸನ ಕಾಯ್ದಿರಿಸುವ ವ್ಯವಸ್ಥೆಯನ್ನು “ಅವತಾರ” ತಂತ್ರಾಂಶದ ಮೂಲಕ ಮಾಡಲಾಗಿದೆ. ಅಲ್ಲದೇ ಬಸ್ ನಿಲ್ದಾಣಗಳ ನಿರ್ಮಾಣ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಪ್ರಗತಿಯಲ್ಲಿದೆ.

ಈ.ಕ.ರ.ಸಾ.ಸಂಸ್ಥೆಯು ಪ್ರಸ್ತುತ ಪ್ರಯಾಣಿಕರಿಗೆ ಒದಗಿಸುತ್ತಿರುವ ಸಾರಿಗೆ ಸೇವೆ ಮತ್ತು ಸೌಲಭ್ಯಗಳ ಮಾಹಿತಿ ಕುರಿತು “ನಾಗರಿಕ ಸನ್ನದ್ದು” ನ್ನು ಮರು ಸಮರ್ಪಿಸುತ್ತಿದೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಯಾವತ್ತೂ ಗೌರವಾನ್ವಿತ ಪ್ರಯಾಣಿಕರ ಅನುಕೂಲಕ್ಕಾಗಿ “ನಾಗರಿಕ ಸನ್ನದ್ದು” ಪ್ರಕಟಿಸಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು ಕಾರ್ಯ ಯೋಜನೆಯನ್ನು ಹಮ್ಮಿಕೊಂಡಿರುವುದು ತುಂಬಾ ಶ್ಲಾಘನೀಯ.

**ಸಂಸ್ಥೆಯ “ನಾಗರಿಕ ಸನ್ನದ್ದು” ಪ್ರಕಟಣೆಗೆ ಶುಭ ಹಾರೈಸುತ್ತೇನೆ.**

**ವ್ಯವಸ್ಥಾಪಕ ನಿರ್ದೇಶಕರು**
**ಈ.ಕ.ರ.ಸಾ.ಸಂಸ್ಥೆ.**

# ಮುನ್ನುಡಿ

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು, ಈಶಾನ್ಯ ಕರ್ನಾಟಕದ ಸಾರ್ವಜನಿಕರಿಗೆ ಉತ್ತಮ ಹಾಗೂ ದಕ್ಷ ಸೇವೆಯನ್ನು ಒದಗಿಸುತ್ತಿರುವ ಬೃಹತ್ ಸಾರಿಗೆ ಸಂಸ್ಥೆಯಾಗಿದೆ. ಈ.ಕ.ರ.ಸಾ.ಸಂಸ್ಥೆಯು ಸಾರ್ವಜನಿಕರಿಗೆ ಉತ್ತಮ ಹಾಗೂ ವ್ಯವಸ್ಥಿತ ಸಾರಿಗೆ ಸೌಲಭ್ಯ ನೀಡುವ ಗುರುತರ ಜವಾಬ್ದಾರಿಯನ್ನು ಹೊಂದಿರುತ್ತದೆ.

ನಾವು ಸಾರ್ವಜನಿಕ ಸೇವೆಗೆ ಬದ್ಧರಾಗಿ ಸಂಸ್ಥೆಯ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಸಂಸ್ಥೆಯಲ್ಲಿ ಸಾರ್ವಜನಿಕರಿಗೆ ಒದಗಿಸಿರುವ ಮೂಲಭೂತ ಸೌಲಭ್ಯಗಳು ಸಾರ್ವಜನಿಕರ ಕಲ್ಯಾಣಕ್ಕಾಗಿಯೇ ಇರುವುದೆಂಬ ಭಾವನೆ ಮೂಡಬೇಕಾಗಿರುತ್ತದೆ.

ಈ.ಕ.ರ.ಸಾ.ಸಂಸ್ಥೆಯು ಹೊರ ತರುತ್ತಿರುವ "ನಾಗರಿಕ ಸನ್ನದ್ದು" ನಲ್ಲಿನ ಯೋಜನೆಗಳನ್ನು ಕಾರ್ಯರೂಪಗೊಳಿಸುವ ಭರವಸೆಯನ್ನು ಹೊಂದಿರುತ್ತದೆ. ಈ ನಾಗರಿಕ ಸನ್ನದ್ದು ಸಾರ್ವಜನಿಕರಿಗೆ ನಮ್ಮ ಸಂಸ್ಥೆಯ ಕಾರ್ಯನಿರ್ವಹಣೆಯ ಬಗ್ಗೆ ಪರಿಚಯಿಸುವ ಜೊತೆಗೆ ಗುಣಮಟ್ಟವನ್ನು ಉತ್ತಮಪಡಿಸುವ ಮೂಲಕ ಸಿಬ್ಬಂದಿ ಮತ್ತು ಸಾರ್ವಜನಿಕರ ಬಾಂಧವ್ಯವನ್ನು ಉತ್ತಮಪಡಿಸುವ ಸೇತುವೆಯಾಗಿರುತ್ತದೆ.

ಸಂಘಟಿತ ಪ್ರಯತ್ನಗಳು ಹಾಗೂ ಅಭಿವೃದ್ಧಿಗಳು ನಮ್ಮ ಸಂಸ್ಥೆಯನ್ನು ದೇಶದಲ್ಲಿಯೇ ಅತ್ಯುತ್ತಮ ಸಾರ್ವಜನಿಕ ಸಾರಿಗೆ ಸಂಸ್ಥೆಯನ್ನಾಗಿ ಪರಿಗಣಿಸಲು ಎಡೆಮಾಡಿಕೊಡುತ್ತದೆ. ಸಂಸ್ಥೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸಮರ್ಪಿತ ಸೇವೆಯಿಂದು ಈ ನಾಗರಿಕ ಸನ್ನದ್ದನ್ನು ಯಶಸ್ವಿಗೊಳಿಸುತ್ತಾರೆ ಎಂಬ ಪೂರ್ಣ ಆತ್ಮವಿಶ್ವಾಸ ಹೊಂದಿರುತ್ತೇನೆ. ಈ.ಕ.ರ.ಸಾ.ಸಂಸ್ಥೆಯು ಸಾರ್ವಜನಿಕರ ಹೃದಯದಲ್ಲಿ ಒಂದು ಉತ್ತಮ ಸ್ಥಾನವನ್ನು ಪಡೆಯುತ್ತದೆ ಎಂಬ ಮಹಾಭಿಲಾಶೆಯನ್ನು ಸಹ ಹೊಂದಿರುತ್ತೇನೆ.

# ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ: ಕಲಬುರಗಿ

ಈ.ಕ.ರ.ಸಾ.ಸಂಸ್ಥೆಯು ಪ್ರಮುಖವಾಗಿ ಕಲಬುರಗಿ ವಿಭಾಗ-1, ಕಲಬುರಗಿ ವಿಭಾಗ-2, ರಾಯಚೂರು, ಬೀದರ, ಬಳ್ಳಾರಿ, ಕೊಪ್ಪಳ ಯಾದಗೀರ, ಹೊಸಪೇಟೆ ಮತ್ತು ವಿಜಯಪುರ ವಿಭಾಗಗಳನ್ನೊಳಗೊಂಡಿದ್ದು, ಈ ಭಾಗದ ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ. ಈ.ಕ.ರ.ಸಾ.ಸಂಸ್ಥೆಯು ಈಶಾನ್ಯ ಭಾಗದ ವ್ಯಾಪ್ತಿಯಲ್ಲಿ 3891 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು ಪ್ರತಿ ದಿನ 13.51 ಲಕ್ಷ ಕಿ.ಮೀ.ಗಳ ಕಾರ್ಯಾಚರಣೆ ಮಾಡಲಾಗುತ್ತಿದೆ. ಸಂಸ್ಥೆಯ ವತಿಯಿಂದ ಸಾರ್ವಜನಿಕ ಪ್ರಯಾಣಿಕರಿಗೆ ಒದಗಿಸಲಾದ ಸೌಲಭ್ಯಗಳ ವಿವರ ಈ ಕೆಳಗಿನಂತಿದೆ.

**A.** **<u>ಸಾರ್ವಜನಿಕರಿಗೆ ನೀಡುತ್ತಿರುವ ಸೇವೆಗಳು</u>:**

1. **ನಿಯಮಿತ ಸೇವೆಗಳು**: ಈ ಸೇವೆಗಳನ್ನು ದಿನನಿತ್ಯದ ಪ್ರಯಾಣಿಕರ ಅನುಕೂಲಕ್ಕಾಗಿ ಒದಗಿಸಲಾಗುತ್ತಿದೆ.
2. **ಅಲ್ಟ್ರಾ ಡಿಲಕ್ಸ್ ಸಾರಿಗೆ ಸೇವೆಗಳು**: ಈ ಸೇವೆಗಳು ಮುಖ್ಯವಾಗಿ ಬೆಂಗಳೂರು, ಹೈದ್ರಾಬಾದ, ಶಿವಮೊಗ್ಗ, ಹುಬ್ಬಳ್ಳಿ, ದಾವಣಗೆರೆ, ಬಳ್ಳಾರಿ ಮತ್ತು ಕರ್ನಾಟಕದ ಪ್ರಮುಖ ನಗರಗಳೊಂದಿಗೆ ಸಂಪರ್ಕವನ್ನು ಹೊಂದಿವೆ. ಇದಲ್ಲದೆ ಸದರಿ ಸಾರಿಗೆಗಳನ್ನು ಅಂತರ ರಾಜ್ಯಗಳ ವ್ಯಾಪ್ತಿಯಲ್ಲಿ ತಿರುಪತಿ ಮತ್ತು ಚನ್ನೈ ಪಟ್ಟಣಗಳಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಅಲ್ಟ್ರಾ ಡಿಲಕ್ಸ್ ಸೇವೆಗಳು **"ರಾಜಹಂಸ"** ಎಂಬ ಹೆಸರಿನೊಂದಿಗೆ ಜನಪ್ರೀಯತೆ ಹೊಂದಿವೆ.
3. **ಪ್ರತಿಷ್ಠಿತ ಕರೋನಾ ಸಾರಿಗೆ ಸೇವೆಗಳು**: ಈ ಸೇವೆಗಳು ಪ್ರಯಾಣಿಕರಿಗೆ ಶೀಘ್ರವಾಗಿ ಆರಾಮದಾಯಕ ಹಾಗೂ ಹವಾ ನಿಯಂತ್ರಿತ ಪ್ರಯಾಣಿಕರಿಗೆ ಸೌಲಭ್ಯವನ್ನು ಮುಖ್ಯವಾಗಿ ಬೆಂಗಳೂರು ಮತ್ತು ಹೈದ್ರಾಬಾದ ಮಾರ್ಗಗಳಲ್ಲಿ ಕಾರ್ಯಾಚರಿಸಲಾಗುತ್ತಿದೆ.
4. **ವೇಗದೂತ ಸೇವೆಗಳು**: ಈ ಸೇವೆಗಳನ್ನು ಪ್ರಮುಖವಾಗಿ ಜಿಲ್ಲಾ ಕೇಂದ್ರಗಳು, ತಾಲೂಕಾ ಕೇಂದ್ರಗಳು ಹಾಗೂ ಅಂತರ ರಾಜ್ಯ ಕೇಂದ್ರಗಳ ನಡುವೆ ಕಾರ್ಯಾಚರಣೆ ಮಾಡಲಾಗುತ್ತಿದೆ.
5. **ಗ್ರಾಮಾಂತರ/ಸಾಮಾನ್ಯ ಸೇವೆಗಳು**: ಈ ಸೇವೆಗಳನ್ನು ತಾಲೂಕು, ಹೋಬಳಿ ಕೇಂದ್ರ ಸ್ಥಾನ ಮತ್ತು ಗ್ರಾಮಗಳಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ. ತಾಲೂಕು ದಿಂದ ತಾಲೂಕಿಗೆ ಸಂಪರ್ಕ ಕಲ್ಪಿಸುವ ಸಾರಿಗೆ ಜಾಲ **"<u>ಈಶಾನ್ಯ ವಾಹಿನಿ</u>"** ಎಂಬ ಹೆಸರಿನೊಂದಿಗೆ ಪ್ರಖ್ಯಾತಿಯನ್ನು ಪಡೆದಿದೆ.
6. **"ಸಗರನಾಡು-150" ಸಾರಿಗೆ ಸೇವೆಗಳು**: ಈ ಸೇವೆಗಳನ್ನು ಪ್ರಮುಖವಾಗಿ ಕಲಬುರಗಿಯಿಂದ ಸುರಪುರ ಮಾರ್ಗದಲ್ಲಿ ಸಾಮಾನ್ಯ ಪ್ರಯಾಣ ದರದಲ್ಲಿ ಕಾರ್ಯಾಚರಣೆ ಮಾಡುತ್ತಿದ್ದು, ಈ ಸೇವೆಗಳ ಮೂಲಕ ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಕರ್ಯವನ್ನು ಒದಗಿಸಲಾಗುತ್ತಿದೆ.
7. **"ಗೋಲಗುಂಬಜ್-220" ಸಾರಿಗೆ ಸೇವೆಗಳು**: ಈ ಸೇವೆಗಳನ್ನು ಪ್ರಮುಖವಾಗಿ ಕಲಬುರಗಿ-ವಿಜಾಪುರ ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.
8. **"ಕಾರಂಜ್-180" ವೇಗದೂತ ಸಾರಿಗೆ ಸೇವೆಗಳು**: ಈ ಸೇವೆಗಳನ್ನು ಕಲಬುರಗಿ-ಬೀದರ ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.
9. **"ಕೃಷ್ಣಾ-120" ಸೇವೆಗಳು**: ಈ ಸೇವೆಗಳನ್ನು ವಿಜಯಪುರ-ಬೆಳಗಾಂವ್ ಮಾರ್ಗದಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.
10. **ನಗರ ಮತ್ತು ಉಪ ನಗರ ವಲಯ ಸೇವೆಗಳು**: ಈ ಸೇವೆಗಳನ್ನು ಪ್ರಮುಖವಾಗಿ ದೊಡ್ಡ ನಗರಗಳು ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಕಲಬುರಗಿ, ಬಳ್ಳಾರಿ, ಹೊಸಪೇಟೆ, ರಾಯಚೂರು, ಬೀದರ, ಯಾದಗೀರ ಹಾಗೂ ವಿಜಯಪುರ ನಗರಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.
11. **ನಿಲುಗಡೆರಹಿತ ಸೇವೆಗಳು**: ಈ ಸೇವೆಗಳನ್ನು ಪ್ರಮುಖವಾಗಿ ಬಳ್ಳಾರಿ-ಹೊಸಪೇಟೆ, ಬೀದರ-ಕಲಬುರಗಿ ಮಾರ್ಗಗಳಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನಿಲುಗಡೆರಹಿತ ಸೇವೆಯನ್ನಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಈ.ಕ.ರ.ಸಾ.ಸಂಸ್ಥೆಯು ತನ್ನ ಎಲ್ಲಾ ಸಾಮಾನ್ಯ, ವೇಗದೂತ ಹಾಗೂ ಪ್ರತಿಷ್ಠಿತ ಸಾರಿಗೆಗಳ ಸೇವೆಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ಮಾಡುತ್ತಿದೆ.

12. **ವಿಶೇಷ ಪ್ರೋತ್ಸಾಹದಾಯಕ ದರದ ಯೋಜನೆ**: ಸಂಸ್ಥೆಯ ಕೆಲವು ಆಯ್ದ ಮಾರ್ಗಗಳಲ್ಲಿ ಹೆಚ್ಚಿನ ಸಂಖ್ಯೆಯ ಪ್ರಯಾಣಿಕರನ್ನು ಆಕರ್ಷಿಸುವ ದೃಷ್ಟಿಯಿಂದ ವಿಶೇಷ ಪ್ರೋತ್ಸಾಹದಾಯಕ ದರಗಳನ್ನು ನಿಗದಿಪಡಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಇದರಿಂದ ಪ್ರಯಾಣಿಕರಿಗೆ ಸಂಸ್ಥೆಯ ವಾಹನಗಳನ್ನು ಉಪಯೋಗಿಸಲು ಹೆಚ್ಚಿನ ಅನುಕೂಲವಾಗುತ್ತಿದೆ. ಈ ಯೋಜನೆಯನ್ನು ಕಲಬುರಗಿ-ಬೀದರ, ಕಲಬುರಗಿ-ವಿಜಯಪುರ, ವಿಜಯಪುರ-ಬೆಳಗಾವಿ, ಬೀದರ-ಔರಾದ, ಬೀದರ-ಭಾಲ್ಕಿ ಮತ್ತು ಬೀದರ-ಮನ್ನಾ-ಏ-ಖೇಳ್ಳಿ, ಬಸವಕಲ್ಯಾಣ-ಕಲಬುರಗಿ ವಾಯಾ ಮುಡಬಿ ಮಾರ್ಗಗಳಲ್ಲಿ ಜಾರಿಗೊಳಿಸಲಾಗಿರುತ್ತದೆ.

**B.** **ಹೆಚ್ಚಿನ/ಕಡಿಮೆ ಸಂಚಾರದ ಒತ್ತಡದ ಅವಧಿಯ ಪ್ರಯಾಣ ದರದ ಯೋಜನೆ:**
ಮಳೆಗಾಲದಲ್ಲಿ ಅಂದರೆ ಜುಲೈ, ಅಗಷ್ಟ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಪ್ರಯಾಣಿಕರ ಬೇಡಿಕೆಗಳನ್ನಾಧರಿಸಿ ಪ್ರತಿಷ್ಠಿತ ಸಾರಿಗೆಗಳ ಟಿಕೇಟ್ ದರದಲ್ಲಿ 10% ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ. ಹಾಗೆಯೇ ಹೆಚ್ಚಿನ ಸಂಚಾರ ಒತ್ತಡವಿರುವ ಅವಧಿಗಳಾದ ಏಪ್ರಿಲ್, ಮೇ, ಜೂನ್ ಮತ್ತು ಅಕ್ಟೋಬರ್ ಮಾಹೆಯಲ್ಲಿ ಜಾರಿಯಲ್ಲಿರುವ ದರಕ್ಕಿಂತ 10% ರಷ್ಟು ಹೆಚ್ಚಿನ ದರವನ್ನು ಆಕರಣೆ ಮಾಡಲಾಗುವುದು.

**C.** **ವಿಶೇಷ ಜಾತ್ರೆ/ಸಂತೆ/ರಜಾ ದಿನಗಳ ಸಂದರ್ಭದ ಸೇವೆಗಳು**: ವಿಶೇಷ ಸಂದರ್ಭಗಳಾದ ಜಾತ್ರೆ ಮತ್ತು ಹಬ್ಬದ ರಜಾ ದಿನಗಳಲ್ಲಿ ಹೆಚ್ಚುವರಿ ಸಾರಿಗೆ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಜಾರಿಯಲ್ಲಿರುವ ಪ್ರಯಾಣ ದರಕ್ಕಿಂತ ಸ್ವಲ್ಪ ಹೆಚ್ಚಿನ ದರದೊಂದಿಗೆ ವಿಶೇಷ ಸಾರಿಗೆ ಸೌಲಭ್ಯಗಳನ್ನು ಒದಗಿಸಲಾಗುವುದು.

**D.** **ಒಪ್ಪಂದದ ಸೇವೆಗಳು:**

1. **ಸಾಂದರ್ಭಿಕ ಒಪ್ಪಂದ**: ವಿಹಾರ, ಮದುವೆ ಮತ್ತು ಪ್ರವಾಸ ಮುಂತಾದವುಗಳಿಗೆ ದಿನಗಳ ಆಧಾರದ ಮೇಲೆ ಮತ್ತು ಗಂಟೆಗಳ ಆಧಾರದ ಮೇಲೆ ರಾಜ್ಯದ ಒಳಗೆ ಮತ್ತು ನೆರೆ ರಾಜ್ಯ ಸ್ಥಳಗಳಿಗೆ ಬಸ್‌ಗಳನ್ನು ಕರಾರು ಒಪ್ಪಂದದ ಮೇಲೆ ನೀಡಲಾಗುತ್ತಿದೆ. ಒಂದು ದಿನ ಅಂದರೆ ಘಟಕದಿಂದ ವಾಹನವನ್ನು ತೆಗೆದುಕೊಂಡು ಹೋದ ಸಮಯದಿಂದ 24 ಗಂಟೆಯ ಅವಧಿಯೊಳಗೆ ಸದರಿ ವಾಹನವನ್ನು ಘಟಕಕ್ಕೆ ಹಿಂತಿರುಗಿಸುವ ಸಮಯದವರೆಗೆ (ಒಂದು ದಿನಕ್ಕೆ) ಕನಿಷ್ಠ ವಾಹನಗಳ ಮಾದರಿಯನ್ನಾಧರಿಸಿ 300 ಕಿ.ಮೀ.ದಿಂದ 500 ಕಿ.ಮೀ. ವರೆಗಿನ ವಾಹನ ಬಳಕೆಯ ಮಿತಿಗೆ ನಿಗದಿಪಡಿಸಲಾಗಿದೆ. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಶಾಲಾ ಕಾಲೇಜುಗಳಿಗೆ ರಿಯಾಯಿತಿ ದರಗಳಲ್ಲಿ ಬಸ್‌ಗಳನ್ನು ಒದಗಿಸಲಾಗುತ್ತಿದೆ (ಶಾಲಾ ಕಾಲೇಜುಗಳಿಗೆ ನೀಡುವ ರಿಯಾಯಿತಿಯು ಅಂತರ ರಾಜ್ಯದ ಸ್ಥಳಗಳಿಗೆ ಪ್ರಯಾಣಿಸುವ ಒಪ್ಪಂದದ ವಾಹನಗಳಿಗೂ ಸಹ).
2. **ಅಂತರ ರಾಜ್ಯ ಸಾಂದರ್ಭಿಕ ಒಪ್ಪಂದದ ಸೇವೆಗಳು**: ಅಂತರ ರಾಜ್ಯದ ಸ್ಥಳಗಳಿಗೆ ಕರಾರು ಒಪ್ಪಂದದ ಮೇಲೆ ವಾಹನಗಳನ್ನು ನೀಡಲಾಗುತ್ತಿದೆ. ಈ ಒಪ್ಪಂದಕ್ಕಾಗಿ ವಿಧಿಸುವ ಪ್ರಯಾಣ ದರ ಇತರ ದರಗಳಿಗಿಂತ ಪ್ರತಿ ಕಿ.ಮೀ.ಗೆ ರೂ.1.00 ಹೆಚ್ಚಿಗೆ ಇರುತ್ತದೆ ಹಾಗೂ ಕೆಲವು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಆದರೆ ಆಯಾ ರಾಜ್ಯ ವಿಧಿಸುವ ಪರವಾನಿಗೆ ಶುಲ್ಕ, ತೆರಿಗೆ ಇತ್ಯಾದಿ ವೆಚ್ಚಗಳನ್ನು ಬಸ್‌ಗಳನ್ನು ಒಪ್ಪಂದದ

ಮೇಲೆ ಪಡೆಯುವವರೇ ಭರಿಸಬೇಕಾಗುತ್ತದೆ. ಈ ಮೊತ್ತವನ್ನು ಒಪ್ಪಂದದ ಮೇರೆಗೆ ವಾಹನವನ್ನು ಪಡೆಯುವ ವೇಳೆ ನಿಯಮಿತ ಬಾಡಿಗೆ ದರದ ಜೊತೆಗೆ ಮುಂಗಡವಾಗಿ ಪಡೆಯಲಾಗುವುದು.

3. **ವಾಹನಗಳ ಕರಾರು ಒಪ್ಪಂದದ ಷರತ್ತು ಮತ್ತು ನಿಬಂಧನೆಗಳು:** ಒಪ್ಪಂದದ ಆಧಾರದ ಮೇಲೆ ಪಡೆದ ವಾಹನಗಳಲ್ಲಿ ನಿಗದಿಪಡಿಸಿದ ಗರಿಷ್ಠ ಮಟ್ಟದ ಆಸನಗಳಿಗಿಂತ ಹೆಚ್ಚು ಪ್ರಯಾಣಿಕರು ಪ್ರಯಾಣಿಸುವಂತಿಲ್ಲ. ಆದರೆ ಒಪ್ಪಂದ ಪಡೆದ ವಾಹನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾತ್ರ ಗರಿಷ್ಠ 10 ಜನರು ಹೆಚ್ಚುವರಿ ಪ್ರಯಾಣದ ಮೊತ್ತವನ್ನು ಕೊಟ್ಟು ನಿಂತು ಪ್ರಯಾಣಿಸಬಹುದಾಗಿದೆ. 6 ರಿಂದ 12 ವರ್ಷದ ಮಕ್ಕಳಿಗೆ ಅರ್ಧ ಟಿಕೇಟ್ ಮೊತ್ತದಲ್ಲಿ 2 ಮಕ್ಕಳನ್ನು ಒಬ್ಬ ವಯಸ್ಕರೆಂದು ಪರಿಗಣಿಸಲಾಗುವುದು. ಒಪ್ಪಂದದ ಆಧಾರದ ಮೇಲೆ ವಾಹನಗಳನ್ನು ನೀಡುವುದಕ್ಕೆ ಮೊತ್ತದ ಜೊತೆಗೆ 20% ರಷ್ಟು ಹೆಚ್ಚಿನ ಹಣವನ್ನು ಭದ್ರತಾ ಠೇವಣಿಯನ್ನಾಗಿ ಪಡೆಯಲಾಗುತ್ತಿದೆ. ಒಪ್ಪಂದದ ಆಧಾರದ ಮೇಲೆ 3 ಅಥವಾ ಹೆಚ್ಚಿನ ದಿನಗಳಿಗಾಗಿ ವಾಹನವನ್ನು ಪಡೆದಾಗ, ಅದರಲ್ಲಿ ಅಥವಾ ಯಾವುದೇ ದಿನ 300 ಕಿ.ಮೀ. ದೂರಕ್ಕಿಂತಲು ಕಡಿಮೆ ದೂರ ಕ್ರಮಿಸಿದ ಸಂದರ್ಭದಲ್ಲಿ ಸರಾಸರಿ ಕಿ.ಮೀ. ಗಳು 300 ಕ್ಕಿಂತಲು ಕಡಿಮೆಯಾದ ಪಕ್ಷದಲ್ಲಿ ಒಪ್ಪಂದದಾರರಿಗೆ ಕನಿಷ್ಠ 300 ಕಿ.ಮೀ. ಆಧಾರದ ಮೇಲೆ ದಿನವಹಿ ಪಾವತಿ ಮಾಡುವ ಅವಕಾಶವಿದೆ. (ಈಶಾನ್ಯ ಸಾರಿಗೆಗೆ).

4. **ಒಪ್ಪಂದದ ಆಧಾರದ ಮೇಲಿನ ಸೇವೆಗಳನ್ನು ಉತ್ತೇಜಿಸಲು ಪ್ರೋತ್ಸಾಹ ಧನ ಯೋಜನೆ:** ಸಾರ್ವಜನಿಕರು/ಏಜೆಂಟರುಗಳು/ಈ.ಕ.ರ.ಸಾ.ಸಂಸ್ಥೆಯ ನಿವೃತ್ತ ಸಿಬ್ಬಂದಿಗಳು ಒಂದು ದಿನದ ಗುತ್ತಿಗೆ ಕಾಯ್ದಿರಿಸುವಿಕೆಗಾಗಿ ರೂ.80/- ಗಳ ಹಾಗೂ 5 ದಿನಗಳಿಗಿಂತ ಹೆಚ್ಚಿನ ಗುತ್ತಿಗೆ ಕಾಯ್ದಿರಿಸುವಿಕೆಗೆ ರೂ: 200/- ಗಳಂತೆ ಪ್ರೋತ್ಸಾಹ ಧನದ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ.

5. **ಚಾರ್ಟರ್ಡ್ ಕಾಂಟ್ರ್ಯಾಕ್ಟ್ (ಗುತ್ತಿಗೆ ಆಧಾರದ ಮೇಲೆ) ಸೇವೆಗಳು:**
   - ಈ.ಕ.ರ.ಸಾ.ಸಂಸ್ಥೆಯು ಕೈಗಾರಿಕೆಗಳು, ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಖಾಸಗಿ ಕಾರ್ಖಾನೆಗಳು ಮತ್ತು ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳಿಗೆ ಚಾರ್ಟರ್ಡ್ ಕಾಂಟ್ರ್ಯಾಕ್ಟ್ ಆಧಾರದ ಮೇಲೆ ಬಸ್‌ಗಳನ್ನು ಒದಗಿಸುತ್ತದೆ.
   - ಈ ರೀತಿ ಚಾರ್ಟರ್ಡ್ ಕಾಂಟ್ರ್ಯಾಕ್ಟ್ ಬಸ್‌ಗಳನ್ನು ನೊಂದಾಯಿತ ಪೋಷಕರು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಅವರ ಮಕ್ಕಳನ್ನು ಶಾಲಾ ಕಾಲೇಜುಗಳಿಗೆ ಕರೆದೊಯ್ಯಲು ರಿಯಾಯಿತಿ ದರದಲ್ಲಿ ಬಸ್‌ಗಳನ್ನು ಒದಗಿಸುತ್ತದೆ.
   - ಚಾರ್ಟರ್ಡ್ ಕಾಂಟ್ರ್ಯಾಕ್ಟ್ ಬಸ್‌ಗಳು ಬೇಕಾದಲ್ಲಿ ಆ ವ್ಯಾಪ್ತಿಯಲ್ಲಿ ಬರುವ ವಿಭಾಗೀಯ ನಿಯಂತ್ರಣಾಧಿಕಾರಿ ಅಥವಾ ಮುಖ್ಯ ಸಂಚಾರ ವ್ಯವಸ್ಥಾಪಕರು, ಈ.ಕ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಗುಲಬರ್ಗಾ ಇವರನ್ನು ಸಂಪರ್ಕಿಸಬಹುದಾಗಿರುತ್ತದೆ.

ಒಪ್ಪಂದದ ಮೇರೆಗೆ ಹಾಗೂ ಚಾರ್ಟರ್ಡ್ ಕಾಂಟ್ರ್ಯಾಕ್ಟ್ ಪಡೆಯುವ ಸೇವೆಗಳ ದರದ ವಿವರಗಳನ್ನು **ಅನುಬಂಧ-1 ಮತ್ತು 2** ರಂತೆ ಲಗತ್ತಿಸಿದೆ.
ಅದೇ ರೀತಿ ಸಂಸ್ಥೆಯ ವಾಹನಗಳ ಮೇಲೆ ಜಾಹೀರಾತು ನೀಡಬಹುದಾಗಿದ್ದು, ದರಗಳ ವಿವರ **ಅನುಬಂಧ-10** ರಂತೆ ಲಗತ್ತಿಸಿದೆ.

**E. ರಿಯಾಯಿತಿ ಪ್ರಯಾಣದ ಸೇವೆಗಳು:**

1. **"ಮಾಸಿಕ ಬಸ್ ಪಾಸ್‌ಗಳ ಯೋಜನೆ"**:ಈಕರಸಾ ಸಂಸ್ಥೆಯ ವ್ಯಾಪ್ತಿಯಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರಿಯಾಯಿತಿ ದರದಲ್ಲಿ ಮಾಸಿಕ ಬಸ್ ಪಾಸ್ ಪಡೆದು ಒಂದು ತಿಂಗಳ ಅವಧಿಗೆ ಪ್ರಯಾಣಿಸಲು **"ಮಾಸಿಕ ಬಸ್ ಪಾಸ್‌ಗಳ ಯೋಜನೆ"**ಯನ್ನು ಜಾರಿಗೆ ತರಲಾಗಿದೆ. ಸದರಿ ಪಾಸ್‌ಗಳ ಹಂತವಾರು ದರಗಳ ವಿವರಗಳನ್ನು **ಅನುಬಂಧ-3** ರಂತೆ ಲಗತ್ತಿಸಿದೆ.

   ಸಾರ್ವಜನಿಕರು ಮಾಸಿಕ ಬಸ್ ಪಾಸುಗಳನ್ನು ಪಡೆಯಲು ಇತ್ತೀಚಿನ ಎರಡು ಭಾವಚಿತ್ರಗಳೊಂದಿಗೆ ಅರ್ಜಿಯನ್ನು ಬಸ್ ನಿಲ್ದಾಣಗಳಲ್ಲಿನ ಪಾಸ್ ಕೌಂಟರ್‌ನಲ್ಲಿ ಸಲ್ಲಿಸಿ ಪಡೆಯಬಹುದಾಗಿರುತ್ತದೆ.

2. **"ದೈನಿಕ ಪಾಸುಗಳ ಯೋಜನೆ"**: ಸಂಸ್ಥೆಯ ವಿವಿಧ ಆಯ್ದ ಮಾರ್ಗಗಳಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಂದು ದಿನದಲ್ಲಿ ಹೋಗಿ ಬರಲು **"ದೈನಿಕ ಪಾಸುಗಳ ಯೋಜನೆ"**ಯನ್ನು ಜಾರಿಗೆ ತರಲಾಗಿದ್ದು, ಸದರಿ ಪಾಸ್‌ಗಳನ್ನು ಪಡೆದ ಪ್ರಯಾಣಿಕರು ಸಂಸ್ಥೆಯ ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಲ್ಲಿ ಪಾಸ್ ಪಡೆದ ದಿನದ ಮಧ್ಯರಾತ್ರಿಯವರೆಗೂ ಪ್ರಯಾಣಿಸಬಹುದಾಗಿರುತ್ತದೆ. ಸದರಿ ಪಾಸ್‌ಗಳನ್ನು ಪಡೆದ ಪ್ರಯಾಣಿಕರು ಲಭ್ಯವಿರುವ ನಗರ ಸಾರಿಗೆ ವಾಹನಗಳಲ್ಲಿ ಉಚಿತವಾಗಿ ಪ್ರಯಾಣಿಸಬಹುದಾಗಿರುತ್ತದೆ. ಸಂಸ್ಥೆಯ ವ್ಯಾಪ್ತಿಯಲ್ಲಿ ಜಾರಿಗೊಳಸಲಾದ ದೈನಿಕ ಪಾಸ್‌ಗಳ ಮಾರ್ಗಗಳ ವಿವರ ಹಾಗೂ ದರಗಳ ಪಟ್ಟಿಯನ್ನು **ಅನುಬಂಧ-4** ರಂತೆ ಲಗತ್ತಿಸಿದೆ

3. **ಪಾಸ್ ವಿತರಿಸುವ ಕೌಂಟರ್‌ಗಳು:** ಈ.ಕ.ರ.ಸಾ.ಸಂಸ್ಥೆಯ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಮಾಸಿಕ/ಸ್ವಾತಂತ್ರ್ಯ ಟಿಕೇಟ್ ಹಾಗೂ ದೈನಿಕ ಪಾಸುಗಳನ್ನು ಕೌಂಟರ್‌ಗಳ ಮೂಲಕ ವಿತರಿಸಲಾಗುತ್ತಿದೆ. ಈ ಕೌಂಟರಗಳು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತವೆ. ಪ್ರಮುಖ ಬಸ್ ನಿಲ್ದಾಣಗಳಲ್ಲಿ ಈ ಸಮಯ ವಿಸ್ತರಿಸಲಾಗಿರುತ್ತದೆ.

F. **ಅವತಾರ ಆನ್ ಲೈನ್ ಮುಂಗಡ ಆಸನ ಬುಕ್ಕಿಂಗ್ ಸೇವೆಗಳು:** ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಯಾವುದೇ ಸ್ಥಳದಿಂದ ಅಂತರ ಜಾಲದ ಮೂಲಕ ಸಾರಿಗೆಗಳಿಗೆ ಮುಂಗಡ ಆಸನಗಳನ್ನು ಕಾಯ್ದಿರಿಸಲು ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ **"ಅವತಾರ"** (Any where Any Time Advance Reservation) ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಸಾರ್ವಜನಿಕರು ದಿನದ 24 ಗಂಟೆಗಳೂ ಮುಂಗಡ ಆಸನಗಳನ್ನು ಅವತಾರ ಕೌಂಟರ್‌ಗಳ (ಸಂಸ್ಥೆಯ/ಖಾಸಗಿ) ಮುಖಾಂತರ ಅಥವಾ ಮೊಬೈಲ್ ಮೂಲಕ ಕಾಯ್ದಿರಿಸಬಹುದಾಗಿರುತ್ತದೆ.

ಸದರಿ ಯೋಜನೆಯಡಿಯಲ್ಲಿ ಆನ್ ಲೈನ್ (ಅಂತರ ಜಾಲ) ಮುಖಾಂತರ ಮುಂಗಡ ಟಿಕೇಟ್‌ಗಳನ್ನು ಕಾಯ್ದಿರಿಸುವ ಸಾರ್ವಜನಿಕ ಪ್ರಯಾಣಿಕರು ಮತದಾರರ ಗುರುತಿನ ಚೀಟಿ, ಸ್ವಯಂ ಪಡಿತರ ಚೀಟಿ, ಚಾಲನಾ ಪರವಾನಿಗೆ, ಆದಾಯ ತೆರಿಗೆ ಇಲಾಖೆಯಿಂದ ವಿತರಿಸಿರುವ ಶಾಶ್ವತ ಖಾತೆ ಸಂಖ್ಯೆ ಚೀಟಿ ಅಥವಾ ರಹದಾರಿ ಪತ್ರಗಳ ಝುರಾಕ್ಸ ಪ್ರತಿಯನ್ನು (ಚನ್ನಾಗಿ ಕಾಣಿಸುವಂತಹದು) ತೋರಿಸಿ ಪ್ರಯಾಣಿಸಲು ಅನುಮತಿಸಲಾಗಿದೆ.

ಆನ್ ಲೈನ್ ಮುಖಾಂತರ ಹಾಗೂ ಕಲಬುರಗಿ ಒನ್ ಮುಖಾಂತರ ಕಾಯ್ದಿರಿಸಲಾಗುವ ಮುಂಗಡ ಟಿಕೇಟ್‌ಗಳನ್ನು ಹೊಂದಿರುವ ವಿದ್ಯಾರ್ಥಿಗಳು, ವಿದ್ಯಾ ಸಂಸ್ಥೆಯ/ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಿರುವ ಮೂಲ ಗುರುತಿನ ಚೀಟಿಯನ್ನು ತೋರಿಸಿ ಪ್ರಯಾಣಿಸಲು ಅನುಮತಿಸಲಾಗಿದೆ.

ಕಲಬುರಗಿ ಒನ್ ಆನ್ ಲೈನ್‌ನಲ್ಲಿ (ಇ-ಬುಕ್ಕಿಂಗ್) ಹಾಗೂ ಮೊಬೈಲ್ ಮೂಲಕ ಮುಂಗಡ ಕಾಯ್ದಿರಿಸುವ ಪ್ರಯಾಣಿಕರಿಗೆ ಸರ್ಕಾರದಿಂದ ಹಾಗೂ ಸಾರಿಗೆ ಸಂಸ್ಥೆಯಿಂದ ವಿತರಿಸಿರುವ ಹಿರಿಯ ನಾಗರಿಕರ ಗುರುತಿನ ಚೀಟಿ ಹಾಗೂ ಸರ್ಕಾರ ಇಲಾಖೆಗಳಂದ ವಿತರಿಸಿರುವ ಭಾವ ಚಿತ್ರವಿರುವ ಗುರುತಿನ ಚೀಟಿಯ ಪ್ರತಿಯನ್ನು ತೋರಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ.

**G. ಅವತಾರ ಬುಕ್ಕಿಂಗ್ ರಿಯಾಯಿತಿ ಸೇವೆಗಳು:**

1. ಒಂದು ಗುಂಪಿನ 4 ಅಥವಾ ಹೆಚ್ಚು ಜನ ಪ್ರಯಾಣಿಕರು ಮುಂಗಡ ಆಸನ ಕಾಯಿರಿಸಿದಲ್ಲಿ ಪ್ರಯಾಣ ದರದಲ್ಲಿ 5% ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ.
2. ಒಂದು ಗುಂಪಿನ 10 ಅಥವಾ ಹೆಚ್ಚು ಜನ ಪ್ರಯಾಣಿಕರು ಮುಂಗಡ ಆಸನ ಕಾಯ್ದಿರಿಸಿದಲ್ಲಿ ಪ್ರಯಾಣ ದರದಲ್ಲಿ 8% ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ.
3. **ಮರು ಪ್ರಯಾಣದ ಟಿಕೇಟ್‌ಗಳ ಮೇಲೆ ರಿಯಾಯಿತಿ:** ಹೋಗುವ ಮತ್ತು ಬರುವ ಪ್ರಯಾಣಕ್ಕೆ ಒಂದೇ ಕಾಲದಲ್ಲಿ ಟಿಕೇಟ್‌ಗಳನ್ನು ಮುಂಗಡವಾಗಿ ಕಾಯ್ದಿರಿಸಿದಲ್ಲಿ ಮರು ಪ್ರಯಾಣದ ಟಿಕೇಟ್ ದರದ ಮೇಲೆ 10% ರಷ್ಟು ರಿಯಾಯಿತಿಯನ್ನು ನೀಡಲಾಗುತ್ತಿದೆ.

**H. ಅವತಾರ ಮುಂಗಡ ಆಸನ ಕಾಯ್ದಿರಿಸುವ ಕೌಂಟರ್‌ಗಳು:** ಈ.ಕ.ರ.ಸಾ.ಸಂಸ್ಥೆಯ ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಅವತಾರ ಕೌಂಟರಗಳನ್ನು ತೆರೆಯಲಾಗಿದ್ದು, ಈ ಕೌಂಟರಗಳಿಂದ ಸಾರ್ವಜನಿಕ ಪ್ರಯಾಣಿಕರು 30 ದಿವಸಗಳ ಮುಂಚಿತವಾಗಿ ಆಸನಗಳನ್ನು ಕಾಯ್ದಿರಿಸಬಹುದಾಗಿರುತ್ತದೆ.

ಸಂಸ್ಥೆಯ ವ್ಯಾಪ್ತಿಯಲ್ಲಿ ಕಲಬುರಗಿ, ಬೀದರ, ಹುಮನಾಬಾದ್, ರಾಯಚೂರು, ಸಿಂಧನೂರು, ಬಳ್ಳಾರಿ, ಹೊಸಪೇಟೆ, ಕೊಪ್ಪಳ, ಲಿಂಗಸೂಗೂರ, ಗಂಗಾವತಿ, ಯಾದಗೀರ ಮತ್ತು ವಿಜಾಪುರ ಕೇಂದ್ರ ಬಸ್ ನಿಲ್ದಾಣಗಳಲ್ಲಿ ಸಂಸ್ಥೆಯ ಕೌಂಟರ್‌ಗಳನ್ನು ಪ್ರಾರಂಭಿಸಲಾಗಿದೆ. ಇದಲ್ಲದೇ ಅಂತರ ರಾಜ್ಯ ವ್ಯಾಪ್ತಿಯ ಹೈದ್ರಾಬಾದ, ಮತ್ತು ಮಂತ್ರಾಲಯಂ ಸ್ಥಳಗಳಲ್ಲಿ ಸಂಸ್ಥೆಯ ಕೌಂಟರ್‌ಗಳನ್ನು ಪ್ರಾರಂಭಿಸಲಾಗಿದೆ.

ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಸಂಸ್ಥೆಯ ಕೌಂಟರಗಳನ್ನು ಹೊರತುಪಡಿಸಿ ಖಾಸಗಿ ಏಜೆಂಟರ್‌ಗಳ ಮೂಲಕ ಅವತಾರ ಮುಂಗಡ ಬುಕ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸಂಸ್ಥೆಯ ವ್ಯಾಪ್ತಿಯಲ್ಲಿ ಕಲಬುರಗಿ,ಬೀದರ,ಯಾದಗೀರ, ಶಹಾಪೂರ,ರಾಯಚೂರು,ಸಿಂಧನೂರ, ಬಳ್ಳಾರಿ, ಹೊಸಪೇಟೆ, ಕೊಪ್ಪಳ, ಗಂಗಾವತಿ ಮತ್ತು ವಿಜಾಪುರ ನಗರಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಖಾಸಗಿ ಏಜೆಂಟರ ಕೌಂಟರಗಳನ್ನು ಮುಂಗಡ ಆಸನ ಬುಕ್ಕಿಂಗ್ ಕಾರ್ಯನಿರ್ವಹಿಸಲು ಅನುಮತಿಸಲಾಗಿದೆ. ಈ ಖಾಸಗಿ ಏಜೆಂಟರಗಳು ಮುಂಗಡ ಟಿಕೇಟ್‌ಗಳನ್ನು ಪ್ರಯಾಣಿಕರ ಮನೆಗೆ ತಲುಪಿಸುವ ವ್ಯವಸ್ಥೆಯನ್ನು ಕೈಗೊಂಡಿರುತ್ತಾರೆ. ಸಂಸ್ಥೆಯ ಅವತಾರ ಕೌಂಟರಗಳ ಹಾಗೂ ಖಾಸಗಿ ಏಜೆಂಟರ್ ಕೌಂಟರ್‌ಗಳ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಿದೆ.

**I. ಮುಂಗಡ ಕಾಯ್ದಿರಿಸಿದ ಟಿಕೇಟ್‌ಗಳನ್ನು ರದ್ದುಗೊಳಿಸುವುದು:** ಮುಂಗಡ ಟಿಕೇಟ್‌ಗಳ ರದ್ದತಿಯನ್ನು ಈ.ಕ.ರ.ಸಾ.ಸಂಸ್ಥೆಯು ನಿಯಮಾನುಸಾರ ಮಾಡಲಾಗುತ್ತದೆ. ಸದರಿ ನಿಯಮಗಳು ದಿನಾಂಕ 1.9.2001 ರಿಂದ ಜಾರಿಯಲ್ಲಿದ್ದು ಪ್ರಸ್ತುತ ನಿಯಮಾವಳಿಗಳು ಈ ಕೆಳಕಂಡಂತಿರುತ್ತವೆ.

**Cancellation Fee slab**

**II.** (The cancellation fee will be deducted from the passenger's reservation amount)

| **Cancellation Fee** | **Duration (Cancellation time)** | **Remarks.** |
|---|---|---|
| 10 % of the basic fare | Up to 72 hours before the departure time | |
| 25 % of the basic fare | Between 72 hours and up to 24 hours before departure time | |
| 50 % of the basic fare | Between 24 hours and up to 30 Minutes before departure time | Conditions apply |
| 100 % of the basic fare + Other fees | Less than 30 minutes before departure time and at / after the departure time. | NO REFUND will be given |

**III.** Cancellation fee in notation form;

| **Duration (Cancellation time)** | **Cancellation fee** | **Refunding Amount** |
|---|---|---|
| >= 72 hrs before departure time | 10 % of Basic fare | 90 % of Basic fare + (Other fees – Res.Fee) |
| <72 hrs and >= 24 hrs before departure time | 25 % of Basic fare | 75 % of Basic fare + (Other fees – Res.Fee) |
| < 24 hrs and >=30 minutes before departure time | 50 % of Basic fare | 50 % of Basic fare + (Other fees – Res.Fee) |
| < 30 minutes before departure time and afterwards | 100 % of Basic fare + Other fees | NO REFUND |

**J. ಸಾಮಾಜಿಕ ಹೊಣೆಗಾರಿಕೆಗಳು:**

1. **ಆಸನಗಳ ಮೀಸಲಾತಿ:** ಈ.ಕ.ರ.ಸಾ.ಸಂಸ್ಥೆಯ ವಾಹನಗಳಲ್ಲಿ ಮಹಿಳೆಯರಿಗೆ, ಅಂಗವಿಕಲರಿಗೆ ಅಂಧರಿಗೆ ಹಾಗೂ ಹಿರಿಯ ನಾಗರಿಕರಿಗೆ ಆಸನಗಳ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. ಮಹಿಳೆಯರಿಗಾಗಿ ಸಂಸ್ಥೆಯ ವೇಗದೂತ ಮತ್ತು ಸಾಮಾನ್ಯ ಸಾರಿಗೆಗಳಲ್ಲಿ 9 ಆಸನಗಳನ್ನು ಹಾಗೂ ನಗರ ಮತ್ತು ಹೊರವಲಯ ಬಸ್‌ಗಳಲ್ಲಿ 14 ಆಸನಗಳನ್ನು ಕಾಯ್ದಿರಿಸಲಾಗಿದೆ. ಅದೇ ರೀತಿ ಅಂಗವಿಕಲರಿಗೆ, ಅಂಧರಿಗೆ ಹಾಗೂ ಹಿರಿಯ ನಾಗರಿಕರಿಗೆ ತಲಾ 2 ಆಸನಗಳನ್ನು ಸಂಸ್ಥೆಯ ವಾಹನಗಳಲ್ಲಿ ಕಾಯ್ದಿರಿಸಲಾಗಿದೆ.
2. **ವಿದ್ಯಾರ್ಥಿಗಳಿಗೆ ರಿಯಾಯಿತಿ ಬಸ್ ಪಾಸ್:** ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಪ್ರಾಥಮಿಕ, ಪ್ರೌಢ ಶಾಲೆ, ಕಾಲೇಜು, ಸಂಜೆ ಕಾಲೇಜು, ಐಟಿಐ ಮತ್ತು ಪಿಎಚ್‌ಡಿ ಕೇಂದ್ರಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಂಸ್ಥೆಯ ಸಾಮಾನ್ಯ ಹಾಗೂ ವೇಗದೂತ ವಾಹನಗಳಲ್ಲಿ ವಿದ್ಯಾರ್ಥಿ ವಾಸಸ್ಥಳದಿಂದ ಶಿಕ್ಷಣ ಸಂಸ್ಥೆ ಇರುವ ಸ್ಥಳಕ್ಕೆ 60 ಕಿ.ಮೀ. ದೂರದವರೆಗೆ ಪ್ರಯಾಣಿಸಲು ರಿಯಾಯಿತಿ ಬಸ್ ಪಾಸ್‌ಗಳನ್ನು ನೀಡುತ್ತಿದೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ (1 ರಿಂದ 7 ನೇ ತರಗತಿವರೆಗೆ ಮಾತ್ರ) ಉಚಿತವಾಗಿ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್‌ಗಳನ್ನು ವಿತರಿಸಲಾಗುತ್ತಿದೆ. ವಿದ್ಯಾರ್ಥಿ ರಿಯಾಯತಿ ಬಸ್ ಪಾಸ್ ದರಗಳನ್ನು ಅನುಬಂಧ-6 ರಂತೆ ಲಗತ್ತಿಸಿದೆ.
3. **ಅಂಧರಿಗೆ ಉಚಿತ ಬಸ್ ಪಾಸ್‌ಗಳು:** ಸಂಸ್ಥೆಯ ಸಾಮಾನ್ಯ/ ವೇಗದೂತ ಸಾರಿಗೆಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ಕಿ.ಮೀ. ಪರಿಮಿತಿ ಇಲ್ಲದೆ ಸಂಚರಿಸಲು ಉಚಿತ ಬಸ್ ಪಾಸ್‌ಗಳನ್ನು ಸರ್ಕಾರದಿಂದ ದೃಢೀಕರಿಸಿದ ಪತ್ರ ಹೊಂದಿದ ಅಂಧರಿಗೆ ನೀಡಲಾಗುತ್ತಿದೆ.
4. **ವಿಕಲಚೇತನರ ರಿಯಾಯಿತಿ ಬಸ್ ಪಾಸ್:** ವಿಕಲಚೇತನರಿಗೆ ಸಂಸ್ಥೆಯ ಸಾಮಾನ್ಯ ಮತ್ತು ವೇಗದೂತ ಸಾರಿಗೆಗಳಿಗೆ ಅವರ ವಾಸಸ್ಥಳದಿಂದ 100 ಕಿ.ಮೀ. ಪರಿಧಿಯಲ್ಲಿ ಸಂಚರಿಸಲು ರಿಯಾಯಿತಿ ಬಸ್ ಪಾಸ್‌ಗಳನ್ನು ಸಂಸ್ಥೆಯ ವತಿಯಿಂದ ನೇರವಾಗಿ ನೀಡಲಾಗುತ್ತಿದೆ. ಪ್ರಸ್ತುತ ಪ್ರತಿ ಬಸ್ ಪಾಸ್ ದರ ರೂ. 660/- ನ್ನು ಪಾವತಿಸಿ ಅಂಗವಿಕಲರು ಒಂದು ವರ್ಷದ ಅವಧಿಗೆ, ಸಂಸ್ಥೆಯ ವಾಹನಗಳಲ್ಲಿ ಸಂಚರಿಸಬಹುದಾಗಿರುತ್ತದೆ.
5. **ಸ್ವಾತಂತ್ರ್ಯ ಹೋರಾಟಗಾರರ ಉಚಿತ ಬಸ್ ಪಾಸ್:** ಈ.ಕ.ರ.ಸಾ.ಸಂಸ್ಥೆಯ ಸಾಮಾನ್ಯ, ವೇಗದೂತ ಸಾರಿಗೆಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ರಾಜ್ಯಾದ್ಯಂತ ಸಂಚರಿಸಲು ಉಚಿತ ಬಸ್ ಪಾಸ್‌ಗಳನ್ನು ನೀಡಲಾಗುತ್ತಿದೆ. 75 ವರ್ಷ ಮತ್ತು ಮೇಲ್ಪಟ್ಟ ವಯೋಮಿತಿಯ ಸ್ವಾತಂತ್ರ್ಯ ಹೋರಾಟಗಾರರ ಜೊತೆಗೆ ಒಬ್ಬ ಸಹಾಯಕರಿಗೆ ಉಚಿತ ಬಸ್ ಪಾಸ್‌ಗಳನ್ನು ನೀಡಲಾಗುತ್ತಿದೆ.
6. **ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ರಿಯಾಯಿತಿ:** 60 ವರ್ಷ ಮತ್ತು ಮೆಲ್ಪಟ್ಟ ವಯಸ್ಸಿನ ಹಿರಿಯ ನಾಗರಿಕರಿಗೆ ಅವರು ಪ್ರಯಾಣಿಸುವ ಪ್ರಯಾಣ ದರದಲ್ಲಿ 25% ರಷ್ಟು ರಿಯಾಯಿತಿಯನ್ನು ನೀಡಲಾಗಿರುತ್ತದೆ. ಸದರಿ ರಿಯಾಯಿತಿಯನ್ನು ಪಡೆಯಲು ಹಿರಿಯ ನಾಗರಿಕರು ಮತದಾರರ ಗುರುತಿನ ಚೀಟಿ, ಸ್ವಯಂ ಪಡಿತರ ಚೀಟಿ, ಚಾಲನಾ ಪರವಾನಿಗೆ, ಆದಾಯ ತೆರಿಗೆ ಇಲಾಖೆಯಿಂದ ವಿತರಿಸಿರುವ ಶಾಶ್ವತ ಖಾತೆ ಸಂಖ್ಯೆ ಚೀಟಿ ಅಥವಾ ರಹದಾರಿ ಪತ್ರಗಳನ್ನು ತೋರಿಸಿ ಸದರಿ ರಿಯಾಯಿತಿಯನ್ನು ಪಡೆಯಬಹುದಾಗಿರುತ್ತದೆ. ಹಿರಿಯ ನಾಗರಿಕರಿಗೆ ಸಂಸ್ಥೆಯ ವತಿಯಿಂದಲೂ ಗುರುತಿನ ಚೀಟಿ ವಿತರಿಸಲಾಗುತ್ತಿದೆ. ಅರ್ಹ ಹಿರಿಯ ನಾಗರೀಕರು ಸಂಸ್ಥೆಯ ಗುರುತಿನ ಚೀಟಿಗಳನ್ನು ಪಡೆಯಲು ಅನುಕೂಲವಾಗುವಂತೆ ಎಲ್ಲಾ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಪಾಸ್ ಕೌಂಟರ್‌ಗಳ ಮೂಲಕ ಗುರುತಿನ

ಚೀಟಿಗಳನ್ನು ವಿತರಿಸುತ್ತಿದ್ದು, ಪಾಸ್‌ಪೋರ್ಟ ಅಳತೆಯ 2 ಭಾವ ಚಿತ್ರಗಳು ಮತ್ತು ವಯಸ್ಸಿನ ದೃಢೀಕರಣ ದಾಖಲಾತಿಗಳೊಂದಿಗೆ, ಉಚಿತವಾಗಿ ಹಿರಿಯ ನಾಗರಿಕರ ಗುರುತಿನ ಚೀಟಿಗಳನ್ನು ಪಡೆಯಬಹುದಾಗಿರುತ್ತದೆ.

7. **ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿ ಯವರಿಗೆ ಉಚಿತ ಕೂಪನ್ ಸೌಲಭ್ಯ:** ಈ.ಕ.ರ.ಸಾ.ಸಂಸ್ಥೆಯು ಸ್ವಾತಂತ್ರ್ಯ ಹೋರಾಟಗಾರರ ಪತ್ನಿ/ವಿಧವಾ ಪತ್ನಿಯವರಿಗೆ ಪ್ರತಿ ವರ್ಷಕ್ಕೆ ರೂ.2000/- ಮೊತ್ತದ ಉಚಿತ ಬಸ್ ಪ್ರಯಾಣದ ಕೋಪನ್‌ಗಳನ್ನು ವಿತರಿಸುತ್ತಿದೆ. ಈ ಸೌಲಭ್ಯವನ್ನು ಪಡೆಯಲಿಚ್ಚಿಸುವ ಅರ್ಹ ಫಲಾನುಭವಿಗಳು ಈ ಕೆಳಕಂಡ ದಾಖಲಾತಿಗಳೊಂದಿಗೆ ಅವರು ವಾಸಿಸುತ್ತಿರುವ ಜಿಲ್ಲಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಬೇಕು.

1. ಸ್ವಾತಂತ್ರ್ಯ ಸೈನಿಕ ಸನ್ಮಾನ ಕುಟುಂಬ ಗೌರವ ಧನ ಮಂಜೂರಾದ ಸರ್ಕಾರಿ ಆದೇಶ.
2. ಕರ್ನಾಟಕ ಮಹಾಲೇಖಪಾಲರು ನೀಡಿರುವ ಗೌರವ ಧನ ಬಟಾವಡೆ ಆದೇಶ.(PPO)
3. ಪತ್ರಾಂಕಿತ ಅಧಿಕಾರಿಗಳು ಧೃಢೀಕರಿಸಿದ ಸ್ವಾತಂತ್ರ್ಯ ಹೋರಾಟಗಾರರ ವಿದುರ ಪತಿ/ವಿಧವಾ ಪತ್ನಿಯವರ ಇತ್ತೀಚಿನ 4 ಪಾಸ್ ಪೋರ್ಟ ಅಳತೆಯ ಭಾವಚಿತ್ರಗಳು.
4. ಜಿಲ್ಲಾಧಿಕಾರಿಗಳು ನಿಗದಿಪಡಿಸಿರುವ ಇನ್ನಿತರ ಮಾಹಿತಿ/ದಾಖಲೆಗಳು.
   ಜಿಲ್ಲಾಧಿಕಾರಿಗಳು ಈ ದಾಖಲಾತಿಗಳನ್ನು ಪರಿಶೀಲಿಸಿ, ಶಿಫಾರಸ್ಸು ಮಾಡಿದ ನಂತರ ಸಂಭಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳಿಂದ ಉಚಿತ ಕೂಪನ್ ಗಳನ್ನು ಪಡೆಯಬಹುದಾಗಿದೆ.

8. ಮಾನ್ಯತೆ ಪಡೆದ ಪತ್ರಕರ್ತರಿಗೆ ರಾಜ್ಯಾದ್ಯಂತ ವೋಲ್ವೋ ಸಹಿತ ಎಲ್ಲಾ ವರ್ಗದ ಪತ್ರಿಕಾ ಚಟುವಟಿಕೆಗಳಿಗಾಗಿ ಪ್ರಯಾಣಿಸಲು ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದೆ.
9. ಈ.ಕ.ರ.ಸಾ.ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿರುವ ವಾಣಿಜ್ಯ ಮಳಿಗೆಗಳಲ್ಲಿ 16.20% ರಷ್ಟು ಮಳಿಗೆಗಳನ್ನು ಪರಿಶಿಷ್ಟ ಜಾತಿಯವರಿಗೆ ಹಾಗೂ 6.55% ರಷ್ಟು ಮಳಿಗೆಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ.
10. ಮುಂಗಡ ಟಿಕೇಟ್ ಕಾಯ್ದಿರಿಸಲು ಖಾಸಗಿ ಟಿಕೇಟ್ ಬುಕ್ಕಿಂಗ್ ಏಜೆಂಟರನ್ನು ನೇಮಕ ಮಾಡಿಕೊಳ್ಳುವಾಗ 10% ರಷ್ಟು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ.
11. ಈ.ಕ.ರ.ಸಾ.ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿರುವ ವಾಣಿಜ್ಯ ಮಳಿಗೆಗಳಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ 10% ಮೀಸಲಾತಿ ಕಲ್ಪಿಸಲಾಗಿದೆ.
12. ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿರುವ ಎಲ್ಲಾ ದೂರವಾಣಿ ಬೂತ್‌ಗಳು ಅಂಧರಿಗಾಗಿ ಮೀಸಲಿಡಲಾಗಿದೆ ( 100% ಕುರುಡರಿಗೆ)
13. **ಬಸ್ ನಿಲ್ದಾಣಗಳಲ್ಲಿ ಗಣಕೀಕೃತ ಪ್ರಯಾಣಿಕರ ಮಾಹಿತಿ (Computerised Passenger Information System) ಜಾರಿಗೊಳಿಸಿರುವ ಬಗ್ಗೆ.**

ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಸಂಸ್ಥೆಯ ವಿವಿಧ ಸೇವೆಗಳನ್ನು ಸುಲಭವಾಗಿ ತಲುಪುವಂತೆ ಹಾಗೂ ನಿಲ್ದಾಣದಲ್ಲ ವಾಹನಗಳ ಆಗಮನ ಮತ್ತು ನಿರ್ಗಮನ ಅಂಕಣ ಸಂಖ್ಯೆ, ಮಾರ್ಗ ಮುಂತಾದವುಗಳನ್ನು ಸರಳವಾಗಿ ತಲುಪುವಂತೆ ಅನುಕೂಲ ಮಾಡಿಕೊಳ್ಳುವ ದೃಷ್ಟಿಯಿಂದ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಗಣಕೀಕೃತ ಪ್ರಯಾಣಿಕರ ಮಾಹಿತಿ ವ್ಯವಸ್ಥೆ (Computerized Passenger Information System) ಜಾರಿಗೊಳಿಸಲಾಗಿದೆ.

**ಈ ವ್ಯಸ್ಥೆಯು ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಈ.ಕ.ರ.ಸಾ.ಸಂಸ್ಥೆಯ 46 ಬಸ್ ನಿಲ್ದಾಣಗಳಲ್ಲಿ ಜಾರಿಗೊಳಿಸಲಾಗಿದೆ**. ಈ ವ್ಯವಸ್ಥೆಯು ಅಂತರಜಾಲ ಆಧಾರಿತ ವ್ಯವಸ್ಥೆಯಾಗಿರುತ್ತದೆ.

ಪ್ರಯಾಣಿಕರಿಗೆ ಈ ವ್ಯವಸ್ಥೆಯಿಂದ ಬಸ್‌ಗಳ ನಿರ್ಗಮನ ವೇಳೆ, ಬಸ್ ನಿಲ್ದಾಣದಿಂದ ಹೊರಡುವ ಪ್ಲಾಟ್‌ಫಾರಂ, ಬಸ್ ಸಂಖ್ಯೆ ಮುಂತಾದ ವಿವರಗಳು ಸ್ಥಳಿಯ ಭಾಷೆಯಲ್ಲಿ ಪ್ರಯಾಣಿಕರಿಗೆ ಸ್ವಯಂ ಭಿತ್ತರಿಸುತ್ತದೆ. ಅದೇ ರೀತಿ ಟಿವಿ ಪರದೆಯ ಮೇಲೆ ಚಿತ್ರ ಸಹ ಮೂಡಿ ಬರುತ್ತದೆ. ಇದರಿಂದ ಪ್ರಯಾಣಿಕರಿಗೆ ತಾವು ಹೋಗುವ ಸ್ಥಳದ ವಾಹನದ ವಿವರವು ಸುಲಭವಾಗಿ ಲಭ್ಯವಾಗುತ್ತದೆ.

**K.** **ಬಸ್ ನಿಲ್ದಾಣಗಳಲ್ಲಿ ದೊರಕುವ ಸೌಲಭ್ಯಗಳು**: ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಒಟ್ಟು 134 ಬಸ್ ನಿಲ್ದಾಣಗಳಿದ್ದು 848 ಬಸ್ ಶೆಲ್ಟರ್‌ಗಳಿರುತ್ತವೆ. ಸಾರ್ವಜನಿಕ ಪ್ರಯಾಣಿಕರಿಗೆ ಮೂಲಭೂತ ಸೌಕರ್ಯಕಗಳಾದ, ಕುಡಿಯುವ ನೀರು, ಶೌಚಾಲಯ, ಮಹಿಳೆಯರ ನಿರೀಕ್ಷಣಾ ಕೊಠಡಿ, ಸಾರ್ವಜನಿಕ ಮಾಹಿತಿ ವ್ಯವಸ್ಥೆ, ಅಂಗವಿಕಲರಿಗೆ ವಿಶೇಷ ಪಾರ್ಕಿಂಗ್ ವ್ಯವಸ್ಥೆ ಮತ್ತು ಉಪಹಾರ ಗೃಹ, ಹಣ್ಣಿನ ಅಂಗಡಿ ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ. ಸಾರ್ವಜನಿಕರಿಗೆ ಗುಲಬರ್ಗಾ ಕೇಂದ್ ಬಸ್ ನಿಲ್ದಾಣ ಮತ್ತು ಈ.ಕ.ರ.ಸಾ.ಸಂಸ್ಥೆಯ ಇತರೆ ಬಸ್ ನಿಲ್ದಾಣಗಳಲ್ಲಿ ಒದಗಿಸಲಾದ ಸೌಲಭ್ಯಗಳ ವಿವರವಾದ ಪಟ್ಟಿಗಳನ್ನು **ಅನುಬಂಧ-7 ಮತ್ತು 8** ರಲ್ಲಿ ಲಗತ್ತಿಸಿದೆ.

**L.** **ಬಸ್ ನಿಲ್ದಾಣಗಳಲ್ಲಿ ವೇಳಾ ಪಟ್ಟಿ ಪ್ರದರ್ಶನ**: ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ ನಿಲ್ದಾಣಗಳ ಸೂಚನಾ ಫಲಕಗಳಲ್ಲಿ ಬಸ್ ನಿಲ್ದಾಣಕ್ಕೆ ಬರುವ ಹಾಗೂ ಹೊರಡುವ ಬಸ್‌ಗಳ ವೇಳಾ ಪಟ್ಟಿಯನ್ನು ಪ್ರದರ್ಶಿಸಲಾಗಿರುತ್ತದೆ. ಈ ಸೂಚನಾ ಫಲಕಗಳಲ್ಲಿ ಹೆಚ್ಚುವರಿ ಆಚರಣೆಗಳು, ಆಚರಣೆಗಳ ರದ್ದತಿ ಹಾಗೂ ಆಚರಣೆಗಳಲ್ಲಿ ಆಗುವ ವಿಳಂಬದ ಬಗ್ಗೆ ಮಾಹಿತಿಯನ್ನು ತಿಳಿಸಲಾಗುವುದು. ಬಸ್ ಆಚರಣೆಗಳಲ್ಲಿ ಆಗಿಂದ್ದಾಗೆ ಆಗುವ ಬದಲಾವಣೆಗಳನ್ನು ವೇಳಾ ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗುವುದು.

**M.** **ವಿಚಾರಣಾ ಕೌಂಟರ್‌ಗಳು:**

- ಪ್ರಯಾಣಿಕರಿಗೆ ಎಲ್ಲಾ ಮಾಹಿತಿಗಳನ್ನು ನೀಡಲು ಹಾಗೂ ಅವರ ವಿಚಾರಣೆಗಳಿಗೆ ಸೂಕ್ತ ಉತ್ತರವನ್ನು ನೀಡಲು ಎಲ್ಲಾ ಬಸ್ ನಿಲ್ದಾಣಗಳಲ್ಲಿ ವಿಚಾರಣೆ ಕಿಟಕಿಗಳನ್ನು ಒದಗಿಸಲಾಗಿದೆ, ವಿಭಾಗಗಳ/ಘಟಕಗಳ ಹಾಗೂ ಬಸ್ ನಿಲ್ದಾಣಗಳ ದೂರವಾಣಿ ಸಂಖ್ಯೆಗಳನ್ನು ಒದಗಿಸಲಾಗಿದ್ದು, ಪ್ರಯಾಣಿಕರು ಅವಶ್ಯ ಮಾಹಿತಿಗಳನ್ನು ದೂರವಾಣಿ ಮೂಲಕ ಪಡೆಯಬಹುದಾಗಿರುತ್ತದೆ.
- ಕಚೇರಿಯ ಕೆಲಸದ ಸಮಯದಲ್ಲ ನಿಲ್ದಾಣದ ಮೇಲ್ವಿಚಾರಕರು/ಅಧಿಕಾರಿಗಳು ಹಾಜರಿರುತ್ತಾರೆ. ಅವರ ಸೇವೆಯನ್ನು ಪ್ರಯಾಣಿಕರು ಪಡೆಯಬಹುದಾಗಿರುತ್ತದೆ. ಇತರೆ ಸಮಯಗಳಲ್ಲಿ ಕರ್ತವ್ಯದ ಮೇಲಿರುವ ಸಂಚಾರ ನಿಯಂತ್ರಕರ ಸೇವೆಗಳನ್ನು ಪಡೆಯಬಹುದಾಗಿರುತ್ತದೆ.
- ಎಲ್ಲಾ ವಿಭಾಗೀಯ ಕೇಂದ್ರ ಸ್ಥಾನಗಳ ಬಸ್ ನಿಲ್ದಾಣಗಳಲ್ಲಿ ವಾಹನಗಳ ಕಾರ್ಯಾಚರಣೆಯ ಬಗ್ಗೆ ಮಾಹಿತಿಗಳನ್ನು ನೀಡುವ ಸಲುವಾಗಿ ನಿಯಂತ್ರಣಾ ಕೊಠಡಿಗಳನ್ನು ಸ್ಥಾಪಿಸಲಾಗಿದೆ.

**N.** **ಸುಗಮ ಪ್ರವೇಶ, ಸುರಕ್ಷತೆ ಮತ್ತು ಪ್ರಯಾಣಿಕರ ಅನುಕೂಲತೆಗಳು**: ಈ.ಕ.ರ.ಸಾ.ಸಂಸ್ಥೆಯು ಬಸ್ ನಿಲ್ದಾಣಗಳಲ್ಲಿ ಸುಗಮವಾದ ವಿಶಾಲವಾದ ದ್ವಾರಗಳನ್ನು ಪ್ರಯಾಣಿಕರು ಹೊರಗೆ ಹೋಗಲು ಮತ್ತು ಒಳಗೆ ಬರಲು ಒದಗಿಸಲಾಗಿದೆ. ಪ್ರಯಾಣಿಕರ ಹಿತದೃಷ್ಟಿ ಮತ್ತು ಸುರಕ್ಷತೆಗಾಗಿ ಪ್ರಮುಖ ನಿಲ್ದಾಣಗಳಲ್ಲಿ ಪೋಲಿಸ್ ಸಿಬ್ಬಂದಿಗಳ ವ್ಯವಸ್ಥೆ ಇದೆ.

**O.** ಸಾರ್ವಜನಿಕ ಪ್ರಯಾಣಿಕರು ಪ್ರಯಾಣಿಸುವಾಗ ಲಗೇಜ್ ಕಳೆದುಕೊಂಡಲ್ಲಿ ಅದು ದೊರತಲ್ಲಿ ಅದನ್ನು ಘಟಕ ವ್ಯವಸ್ಥಾಪಕರ ಮುಖಾಂತರ ಸಂಬಂಧಪಟ್ಟ ಪ್ರಯಾಣಿಕರಿಗೆ ಹಿಂದಿರುಗಿಸಲಾಗುವುದು.

**P. ಸಂಸ್ಥೆಯ ಸಿಬ್ಬಂದಿಗಳ ಸೌಜನ್ಯ ವರ್ತನೆಯ ಭರವಸೆ:** ಈ.ಕ.ರ.ಸಾ.ಸಂಸ್ಥೆಯ ಸಿಬ್ಬಂದಿಗಳು ಪ್ರಯಾಣಿಕರೊಡನೆ ಸೌಜನ್ಯದಿಂದ ವರ್ತಿಸುವುದರೊಂದಿಗೆ ಪ್ರಯಾಣಿಕರನ್ನು ಗೌರವಾನ್ವಿತ ಸಹಭಾತ್ವದಾರರೆಂದು ಪರಿಗಣಿಸುತ್ತದೆ. ಈ ಬಗ್ಗೆ ಸಂಸ್ಥೆಯು ಎಲ್ಲಾ ಸಿಬ್ಬಂದಿಗಳಿಗೆ ನಿಯಮಿತವಾಗಿ ತರಬೇತಿಯನ್ನು ನೀಡಲಾಗುತ್ತಿದೆ. ಪ್ರತಿಯೊಂದು ದೂರಿನ ಬಗ್ಗೆ ತ್ವರಿತವಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

**Q. ಈ.ಕ.ರ.ಸಾ.ಸಂಸ್ಥೆಯು ಪ್ರಯಾಣಿಕರ ಸುರಕ್ಷತೆಯ ಬಗ್ಗೆ ಎಲ್ಲಾ ರೀತಿಯ ಕಾಳಜಿಯನ್ನು ವಹಿಸುತ್ತದೆ, ಹಾಗೂ ಅಪಾಯ ಸಂಭವಿಸದ ಹಾಗೆ ಸುರಕ್ಷತಾ ಚಾಲನೆಯ ಬಗ್ಗೆ ಈ ಕೆಳಕಂಡ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿರುತ್ತದೆ.**

1. ಈ.ಕ.ರ.ಸಾ.ಸಂಸ್ಥೆಯ ಎಲ್ಲಾ ವಾಹನಗಳಿಗೆ ವೇಗ ನಿಯಂತ್ರಣ ಉಪಕರಣಗಳನ್ನು ಅಳವಡಿಸಲಾಗಿದೆ.
2. ಚಾಲಕರುಗಳಿಗೆ ನಿರ್ಧಿಷ್ಟ ಮತ್ತು ನಿಯಮಿತವಾದ ತರಬೇತಿಯನ್ನು ಕೊಡಲಾಗುತ್ತಿದೆ.
3. ಚಾಲಕರು ಹಾಗೂ ಇತರೆ ಸಿಬ್ಬಂದಿಯವರು ಮದ್ಯಪಾನ ಮಾಡಿ ಕಾರ್ಯನಿರ್ವಹಿಸುವುದನ್ನು ತಡೆಗಟ್ಟಲು Breath Analyzer ಮೂಲಕ ಪರಿಣಾಮಕಾರಿಯಾದ ತಪಾಸಣೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.
4. ವಾಹನಗಳನ್ನು ಎಲ್ಲಾ ರೀತಿಯಲ್ಲೂ ಸುಸ್ಥಿತಿಯಲ್ಲಿ ಇಡುವುದಕ್ಕಾಗಿ ವಾಹನಗಳ ತಾಂತ್ರಿಕ ನಿರ್ವಹಣೆಯ ವ್ಯವಸ್ಥೆಯನ್ನು ಕೈಗೊಳ್ಳಲಾಗುತ್ತಿದೆ.
5. ಸಂಸ್ಥೆಯ ಎಲ್ಲಾ ಘಟಕಗಳಲ್ಲಿ ಪ್ರತಿ ತಿಂಗಳ ಕೊನೆಯ ಒಂದು ದಿನ **"ರಸ್ತೆ ಸುರಕ್ಷತಾ ದಿನವನ್ನಾಗಿ"** ಆಚರಿಸಲಾಗುತ್ತಿದೆ.
6. ನಾವು ಕೆಲಸಕ್ಕೆ ಸಮಯಬದ್ದರಾಗಿದ್ದೇವೆ ಮತ್ತು ನಿಯಮಿತರಾಗಿದ್ದೇವೆ ದೈನಂದಿನ ಆಕ್ಷೇಪಣೆಗಳನ್ನು ಅಂದೇ ನಿರ್ವಹಿಸುತ್ತೇವೆ ಮತ್ತು ಸರಿಯಾಗಿ ಸ್ಪಂದಿಸುತ್ತೇವೆ.
7. **ಪ್ರಯಾಣಿಕರಿಗೆ ವಿಮಾ ಸೌಲಭ್ಯ:**

ಅ) ಸಂಸ್ಥೆಯ ವಾಹನಗಳು ಆಕಸ್ಮಿಕವಾಗಿ ಅಪಘಾತಕ್ಕೊಳಗಾಗಿ ಪ್ರಯಾಣಿಕರು ಮೃತಪಟ್ಟಲ್ಲಿ ಅವರ ಅವಲಂಭಿತರಿಗೆ ರೂ.2.50 ಲಕ್ಷಗಳ ವಿಮಾ ಪರಿಹಾರ ನೀಡಲಾಗುತ್ತಿದೆ. ಸಂಸ್ಥೆಯ ವಾಹನಗಳೊಂದಿಗೆ ಇತರೆ ವಾಹನಗಳ ಪ್ರಯಾಣಿಕರು, ಪಾದಚಾರಿಗಳು, ಪ್ರಯಾಣಿಕೇತರರು, ಸಂಸ್ಥೆಯ ವಾಹನಗಳೊಂದಿಗೆ ಅಪಘಾತದ ಪ್ರಕರಣಗಳಲ್ಲಿ ಮೃತಪಟ್ಟಲ್ಲಿ ಅವರ ಅವಲಂಭಿತರಿಗೆ ₹ 50000.00 ಪರಿಹಾರವನ್ನು ನೀಡಲಾಗುತ್ತಿದೆ.

ಆ) ಆಘಘಾತ ಪರಿಹಾರ ನಿಧಿ ಟ್ರಸ್ಟ್ ವತಿಯಿಂದ ರೂ.100/- ಹಾಗೂ ಅದಕ್ಕೂ ಮೇಲ್ಪಟ್ಟು ಟಿಕೇಟ್ ಖರೀದಿಸಿ, ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಂದ ರೂ.1/- ವಂತಿಕೆಯನ್ನು ಪಡೆಯಲಾಗುತ್ತಿದೆ.

ಇ) ಕಾಲಮಿತಿಯೊಳಗಡೆ ಅಪಘಾತ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಅಪಘಾತ ಪರಿಹಾರ ಕೋರಿ ಮೃತರ ಅವಲಂಭಿತರು ಈ.ಕ.ರ.ಸಾ.ಸಂಸ್ಥೆಯ ಸಂಬಂಧಪಟ್ಟ ಅರ್ಜಿಯೊಂದಿಗೆ ಮರಣ ಪ್ರಮಾಣ ಪತ್ರ, ಎಫ್ಐಆರ್ ಪೋಸ್ಟ ಮಾರ್ಟಮ್ ವರದಿ, ಮೃತರಿಗೆ ಸಂಬಂಧವಿರುವ ವಾರಸದಾರರಾಗಿರುವ ಕುರಿತು ಪ್ರಮಾಣ ಪತ್ರವನ್ನು ನೋಟರಿಯವರ ಸಹಿಯೊಂದಿಗೆ ಪಡೆದ ಅಫಿಡವೇಟ್‌ನ್ನು ಸಂಬಂಧಪಟ್ಟ ವಿಭಾಗೀಯ ಕಛೇರಿಯಲ್ಲಿ ಸಲ್ಲಿಸುವುದು.

**R. ಸುಖಕರ ಪ್ರಯಾಣಕ್ಕಾಗಿ ಕ್ರಮಗಳು:**

1. ಈ.ಕ.ರ.ಸಾ.ಸಂಸ್ಥೆಯ ಪ್ರಯಾಣಿಕರ ಸುಖಕರ ಹಾಗೂ ಆರಾಮದಾಯಕ ಪ್ರಯಾಣಕ್ಕಾಗಿ ಕಾಲಕಾಲಕ್ಕೆ ಬದಲಾಗುತ್ತಿರುವ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಸಂಸ್ಥೆಯು ಕರೋನಾ ಹವಾ ನಿಯಂತ್ರಿತ ಸಾರಿಗೆಗಳನ್ನು ಪ್ರಯಾಣಿಕರ ಅನುಕೂಲಕ್ಕಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ.
2. ಮಾರ್ಗ ಸೂಚಿ ಫಲಕಗಳೊಂದಿಗೆ ಕಸಗೂಡಿಸಿ, ತೊಳೆದ ಸ್ವಚ್ಛವಾದ ವಾಹನಗಳನ್ನು ಆಚರಣೆ ಮಾಡುವುದಾಗಿ ಸಂಸ್ಥೆಯು ಆಶ್ವಾಸನೆಯನ್ನು ಕೊಡುತ್ತದೆ.

**S. ಪರಿಸರ ಸ್ನೇಹಿ ಕಾರ್ಯಕ್ರಮಗಳು:** ಈ.ಕ.ರ.ಸಾ.ಸಂಸ್ಥೆಯು ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ಜಲ ಮಾಲಿನ್ಯ ಹಾಗೂ ಪರಿಸರದ ಮೇಲೆ ಬೀರುವ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟಲು ಸೂಕ್ತ ಹಾಗೂ ವ್ಯವಸ್ಥಿತ ಕ್ರಮಗಳನ್ನು ಕೈಗೊಳ್ಳುತ್ತಿದೆ. ಪರಿಮಿತಿಯನ್ನು ದಾಟಿ ಹೊಗೆ ಉಗುಳುವ ಯಾವುದೇ ವಾಹನ ಈ.ಕ.ರ.ಸಾ.ಸಂಸ್ಥೆಯಲ್ಲಿ ಇರುವುದಿಲ್ಲ.

**T. ಸೇವೆಯಲ್ಲಿ ನ್ಯೂನತೆಗಳಾದಾಗ ಪ್ರಯಾಣಿಕರು ಏನು ಮಾಡಬೇಕು:**

- **ಕಳೆದುಕೊಂಡ ಟಿಕೇಟ್‌ಗಳು:** ಪ್ರಯಾಣಿಕರು ಖರೀದಿಸುವ ಟಿಕೇಟ್‌ಗಳು ಆಗಿನ ಪ್ರಯಾಣಕ್ಕೆ ಸಂಬಂಧಿಸಿದಂತೆ ಮಾತ್ರ ಅಧಿಕೃತವಾಗಿರುತ್ತದೆ. ಸದರಿ ಟಿಕೇಟ್‌ಗಳನ್ನು ವರ್ಗಾಯಿಸತಕ್ಕದಲ್ಲ. ಟಿಕೇಟ್‌ಗಳು ಕಳೆದುಹೋದಲ್ಲಿ ಅದಕ್ಕೆ ಈ.ಕ.ರ.ಸಾ.ಸಂಸ್ಥೆಯು ಜವಾಬ್ದಾರಿಯಾಗಿರುವುದಿಲ್ಲ.

- **ಸೇವೆಗಳ ರದ್ದತಿ:** ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಈ.ಕ.ರ.ಸಾ.ಸಂಸ್ಥೆಯು ಎಲ್ಲಾ ಅನುಸೂಚಿಗಳನ್ನು ತಪ್ಪದೇ ನಿಗದಿತ ಸಮಯಕ್ಕೆ ಕಾರ್ಯಾಚರಣೆ ಮಾಡಲು ಗುರಿ ಹೊಂದಿರುತ್ತದೆ. ಇನ್ನಿತರ ಯಾವುದೇ ಸಂದರ್ಭಗಳಲ್ಲಿ ಯಾವುದೇ ಸೇವೆಯು ರದ್ದಾಗದಂತೆ ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇವೆ. ಯಾವುದೇ ಕಾರ್ಯಾಚರಣೆಯು ರದ್ದಾದಲ್ಲಿ ಆ ಬಗ್ಗೆ ಸಾರ್ವಜನಿಕರಿಗೆ ಆದಷ್ಟು ಬೇಗನೆ ತಿಳಿಸುವ ಜೊತೆಗೆ ಪರ್ಯಾಯ ವ್ಯವಸ್ಥೆಗಾಗಿ ಇತರೆ ವಾಹನಗಳಲ್ಲಿ ಸ್ಥಳಾವಕಾಶ ಮಾಡಿಕೊಲಾಗುವದು ಅಥವಾ ಅವರು ನೀಡಿರುವ ಪ್ರಯಾಣ ದರದ ಹಣವನ್ನು ಮರಳಿಸಲಾಗುವುದು.

- **ಅಪಘಾತಗಳು ಮತ್ತು ಅವಘಡಗಳ ಮಾಹಿತಿ:**

**ಅ)** ಎಲ್ಲಾ ವಿಭಾಗೀಯ ಕೇಂದ್ರ ಸ್ಥಾನಗಳ ಬಸ್ ನಿಲ್ದಾಣಗಳಲ್ಲಿ ಸಂಚಾರ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಲಾಗಿದ್ದು, ಈ ಸ್ಥಳಗಳಲ್ಲಿ ಅಪಘಾತಗಳು, ಅವಘಡಗಳು, ವಾಹನ ಕಾರ್ಯಾಚರಣೆಯಲ್ಲಿ ವಿಳಂಬಗಳು, ಹೆಚ್ಚುವರಿ ಕಾರ್ಯಾಚರಣೆಗಳು ಇತ್ಯಾದಿ ಮಾಹಿತಿಗಳನ್ನು ಸ್ವೀಕರಿಸಿ ಸಾರ್ವಜನಿಕರಿಗೆ ಮಾಹಿತಿಯನ್ನು ಒದಗಿಸಲಾಗುವುದು.

**ಆ)** ಅಪಘಾತ ಪ್ರಕರಣಗಳಲ್ಲಿ ಅಪಘಾತದ ಬಗ್ಗೆ ಸುದ್ದಿ ಬಂದ ತಕ್ಷಣ ಕಾರ್ಯನಿರತ ಸಂಚಾರ ನಿರೀಕ್ಷಕರು ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಹತ್ತಿರದಲ್ಲಿರುವ ಆಸ್ಪತ್ರೆಗಳಿಗೆ ಸಾಗಿಸಲು ಕ್ರಮ ಕೈಗೊಳ್ಳುತ್ತಾರೆ. ಗಾಯಾಳುಗಳಿಗೆ ಗಾಯದ ಪ್ರಮಾಣ ಅನುಸಾರ ಗರಿಷ್ಠ ರೂ.5,000/- ಗಳವರೆಗೆ ಎಕ್ಸ್‌ಗ್ರೇಷಿಯಾ ರೂಪದಲ್ಲಿ ಆರ್ಥಿಕ ಪರಿಹಾರವನ್ನು ನೀಡಲಾಗುವುದು. ಹಾಗೂ ದುರ್ಮರಣ ಹೊಂದಿದ ಪ್ರಯಾಣಿಕರಿಗೆ ₹ 15,000/- ಗಳನ್ನು ನೀಡಲಾಗುವುದು.

ಇ) ಮುಂದುವರೆದಂತೆ ಗಾಯಾಳುಗಳು/ಮೃತ ಪ್ರಯಾಣಿಕರ ಅವಲಂಭಿತರು ಉಳಿದಂತೆ ಪರಿಹಾರ ಹಣವನ್ನು ಮೋಟಾರು ವಾಹನಗಳ ಕಾಯ್ದೆ ಹಾಗೂ ನಿಯಮಾವಳಿಯನ್ವಯ ಪಡೆಯಲು ಅರ್ಹರಿರುತ್ತಾರೆ.

ಈ) ಶಾಶ್ವತವಾಗಿ ಅಂಗವಿಕಲತೆಗೊಂಡ ಪ್ರಯಾಣಿಕರು ಹಾಗೂ ಮೃತಗೊಂಡ ಪ್ರಯಾಣಿಕರ ಅವಲಂಭಿತರು ಯಾವುದೇ ನ್ಯಾಯಾಲಯವನ್ನು ಸಂಪರ್ಕಿಸದೇ ಕ್ರಮವಾಗಿ ರೂ.25,000/- ಮತ್ತು ರೂ.50,000/- ಗಳ ಪರಿಹಾರ ಧನವನ್ನು ಪಡೆಯಬಹುದಾಗಿರುತ್ತದೆ. ಈ ವಿಷಯದಲ್ಲಿ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳನ್ನು ಸಂಪರ್ಕಿಸ-ಬಹುದಾಗಿರುತ್ತದೆ.

ಉ) ಈ.ಕ.ರ.ಸಾ.ಸಂಸ್ಥೆಯ ವಾಹನಗಳ ಅಪಘಾತದಿಂದಾಗಿ ಪ್ರಯಾಣಿಕರು ಮರಣ ಹೊಂದಿದಲ್ಲಿ ಅವರ ಹತ್ತಿರದ ವಾರಸುದಾರರಿಗೆ ರೂ.2.50 ಲಕ್ಷಗಳನ್ನು "Insurance Fund" ನಿಂದ ಕೊಡಲಾಗುವುದು.

ಊ) ಅವಘಡಗಳಾದ ಸಂದರ್ಭದಲ್ಲಿ ವರ್ತಮಾನ ಬಂದ ಕೂಡಲೇ 2 ಗಂಟೆಯೊಳಗಾಗಿ ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆಯನ್ನು ಒದಗಿಸಲಾಗುವುದು.

ಋ) ಜೊತೆಗೆ ಪ್ರಯಾಣಿಕರನ್ನು ಆ ಮಾರ್ಗದಲ್ಲಿ ಸಂಚರಿಸುವ ಸಂಸ್ಥೆಯ ಬೇರೆ ಬಸ್‌ಗಳಲ್ಲಿ ಪ್ರಯಾಣಿಸಲು ಅನುಮತಿಸಲಾಗುವುದು. ಕಡಿಮೆ ದರ್ಜೆಯ ಸೇವೆಯ ವಾಹನಗಳು ಅವಘಡಗಳಾದ ಸಂದರ್ಭದಲ್ಲಿ ಮೇಲ್ದರ್ಜೆಯ ಸೇವೆಯ ಹೆಚ್ಚುವರಿ ದರವನ್ನು ವಿಧಿಸದೇ ವಾಹನಗಳಲ್ಲಿ ಪ್ರಯಾಣಿಸಲು ಅನುಮತಿಸಲಾಗುವುದು. ಮೇಲ್ದರ್ಜೆ ಸೇವೆಯ ವಾಹನಗಳು ಅವಘಡವಾದಲ್ಲಿ ಈ ಕೆಳ ದರ್ಜೆಯ ವಾಹನಗಳಲ್ಲಿ ಪ್ರಯಾಣಿಸಲು ಅನುಮತಿ ನೀಡುವುದರ ಜೊತೆಗೆ ವ್ಯತ್ಯಾಸದ ದರದ ಮೊತ್ತವನ್ನು ಹಿಂದಿರುಗಿಸಲಾಗುವುದು.

**U. ಸಲಹೆಗಳು ಮತ್ತು ದೂರುಗಳು:**

**ಅ)** ಈ.ಕ.ರ.ಸಾ.ಸಂಸ್ಥೆಯು ಪ್ರಯಾಣಿಕರಿಂದ ದೂರುಗಳನ್ನು ಸ್ವಾಗತಿಸುತ್ತದೆ, ಮತ್ತು ಅವರ ದೂರುಗಳನ್ನು ಸಾಧ್ಯವಿದ್ದಷ್ಟು ಕೂಡಲೇ ಬಗೆಹರಿಸಲು ದೃಢ ಸಂಕಲ್ಪ ಮಾಡುತ್ತದೆ, ಮತ್ತು 30 ದಿನಗಳ ಒಳಗೆ ಅವುಗಳನ್ನು ಇತ್ಯರ್ಥಪಡಿಸಲಾಗುವುದು. ಸಂಸ್ಥೆಯ ವಿಭಾಗೀಯ ಕಛೇರಿ ಮತ್ತು ಘಟಕಗಳಲ್ಲಿ ದೂರುಗಳನ್ನು ದಾಖಲಿಸಬಹುದಾಗಿದ್ದು ಸಂಬಂಧಪಟ್ಟ ಕಛೇರಿಗಳ ವಿವರ ಮತ್ತು ದೂರವಾಣಿ ಸಂಖ್ಯೆಗಳ ಪಟ್ಟಿಯನ್ನು **ಅನುಬಂಧ-9** ರಲ್ಲಿ ಲಗತ್ತಿಸಿದೆ.

ಆ) ಎಲ್ಲಾ ಚಾಲಕರು/ನಿರ್ವಾಹಕರು/ಸಂಚಾರ ನಿಯಂತ್ರಕರು/ ಸಂಚಾರ ನಿರೀಕ್ಷಕರು ಹಾಗೂ ಇತರೆ ಸಿಬ್ಬಂದಿಗಳು ಕರ್ತವ್ಯದ ಮೇಲಿರುವಾಗ ಕಡ್ಡಾಯವಾಗಿ ಸಮವಸ್ತ್ರ ಹಾಗೂ ಬ್ಯಾಡ್ಜನ್ನು ಧರಿಸಿರುತ್ತಾರೆ. ಅಲ್ಲದೇ ಗುರುತಿನ ಚೀಟಿಯನ್ನು ಹೊಂದಿರುತ್ತಾರೆ.

ಇ) ಯಾವುದಾದರು ಸಲಹೆ/ದೂರುಗಳಿದ್ದಲ್ಲಿ ಬಸ್ ನಿಲ್ದಾಣಗಳಲ್ಲಿ ಇದಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ದಾಖಲಿಸಬಹುದು. ಸಲಹೆ/ದೂರುಗಳನ್ನು ಬಸ್ ನಿಲ್ದಾಣಗಳಲ್ಲಿ ಇಟ್ಟಿರುವ **"ಸಲಹೆ/ದೂರು ಪೆಟ್ಟಿಗೆ"** ಯೊಳಗೆ ಹಾಕಬಹುದು. ಅಲ್ಲದೇ ದೂರುಗಳನ್ನು ಬಸ್ ನಿಲ್ದಾಣಗಳಿಗೆ ಸಂಬಂಧಿಸಿದ ಮೇಲಾಧಿಕಾರಿಗಳು, ಘಟಕ ವ್ಯವಸ್ಥಾಪಕರು, ವಿಭಾಗೀಯ ನಿಯಂತ್ರಣಾಧಿಕಾರಿಗಳು, ಮುಖ್ಯ ಸಂಚಾರ ವ್ಯವಸ್ಥಾಪಕರು ಈ.ಕ.ರ.ಸಾ.ಸಂಸ್ಥೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಈ.ಕ.ರ.ಸಾ. ಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರಿಗೆ ಕಳುಹಿಸಬಹುದಾಗಿದೆ. ದೂರುಗಳನ್ನು mdnekrtc@gmail.com ಇ-ಮೇಲ್ ಮುಖಾಂತರ ಕಳುಹಿಸಬಹುದಾಗಿದೆ.

**ಈ)** ದೂರುಗಳು ಯಾವುದೇ ರೀತಿಯದ್ದಾಗಿರಬಹುದು, ಅಂದರೆ ಟಿಕೇಟ್ ನೀಡದೇ ಇರುವುದು, ಹಳೆಯ ಟಿಕೇಟ್‌ಗಳನ್ನು ನೀಡುವುದು, ಚಾಲಕರು, ನಿರ್ವಾಹಕರು ಹಾಗೂ ಇತರೆ ಸಿಬ್ಬಂದಿಗಳ ಅನುಚಿತ ವರ್ತನೆ, ಭ್ರಷ್ಟಾಚಾರ, ಚಾಲಕ/ನಿರ್ವಾಹಕರುಗಳು ಧೂಮಪಾನ ಮಾಡುವ ಬಗ್ಗೆ, ಅಧಿಕೃತ ವಾಹನ ನಿಲುಗಡೆ ಸ್ಥಳಗಳಲ್ಲಿ ಬಸ್ ನಿಲ್ಲಿಸದೇ ಇರುವುದು, ಅನಧಿಕೃತ ಸ್ಥಳಗಳಲ್ಲಿ ವಾಹನ ನಿಲ್ಲಿಸುವುದು, ಹತೋಟಿ ಮೀರಿದ ಚಾಲನೆ, ಮದ್ಯಪಾನ ಮಾಡಿ ಚಾಲನೆ ಮಾಡುವುದು, ವಾಹನ ಕಾರ್ಯಾಚರಣೆ ಆಗದೇ ಇರುವುದು, ಬಸ್ ನಿಲ್ದಾಣದ ಮೇಲ್ವಿಚಾರಕರನ್ನು ಸಂಪರ್ಕಿಸಿದಾಗ ಸರಿಯಾಗಿ ಪ್ರತಿಕ್ರಿಯಿಸದೇ ಇರುವುದು ಇತ್ಯಾದಿ.

**ಉ)** ಸಾಮಾನ್ಯವಾಗಿ ಎಲ್ಲಾ ದೂರು/ಸಲಹೆಗಳನ್ನು 7 ದಿನದೊಳಗಾಗಿ ನೊಂದಾಯಿಸಿಕೊಂಡು 30 ದಿನದೊಳಗೆ ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಉತ್ತರಿಸಲಾಗುವುದು. ಮುಂದುವರೆದಂತೆ ದೂರಿನ ಸ್ವರೂಪತೆಯನ್ನು ಅವಲಂಭಿಸಿ ತಪ್ಪಿತಸ್ಥರ ಸಿಬ್ಬಂದಿಯವರ ಮೇಲೆ ವಿಚಾರಣೆ ನಡೆಯಿಸಿ ಶಿಸ್ತು ಕ್ರಮ ಜರುಗಿಸಲಾಗುವುದು. ಅವಶ್ಯಕತೆ ಕಂಡು ಬಂದಲ್ಲಿ ದೂರುದಾರರನ್ನು ಸಹ ವಿಚಾರಣೆಗೆ ಕರೆಸಲಾಗುವುದು. ಅದಕ್ಕೆ ಸಂಬಂಧಪಟ್ಟಂತೆ ಪ್ರಯಾಣಿಕರ ಟಿಕೇಟನ್ನು ಸಂಸ್ಥೆಯಿಂದ ಕಳುಹಿಸಲಾಗುವುದು. ವಿಚಾರಣೆ ಅಧಿಕಾರಿಗಳ ವರದಿಗಳನ್ನು ಅನುಸರಿಸಿ ಪ್ರಕರಣಗಳನ್ನು ಇತ್ಯರ್ಥ-ಗೊಳಿಸಲಾಗುವುದು.

**ಊ)** ದೂರುಗಳನ್ನು ಸಕಾಲದಲ್ಲಿ ಪರಿಶೀಲಿಸಿ ಉತ್ತರ ನೀಡದಿದ್ದಲ್ಲಿ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಅಥವಾ ವ್ಯವಸ್ಥಾಪಕ ನಿರ್ದೇಶಕರಿಗೆ ಈ ಬಗ್ಗೆ ದೂರನ್ನು ಸಲ್ಲಿಸಬಹುದಾಗಿದೆ. ವಿಭಾಗೀಯ ನಿಯಂತ್ರಣಾಧಿಕಾರಿಗಳ ಹೆಸರು, ವಿಳಾಸ, ದೂರವಾಣಿ ಸಂಖ್ಯೆಯ ವಿವರಗಳನ್ನು ಸಂಬಂಧಿಸಿದ ಬಸ್ ನಿಲ್ದಾಣಗಳಲ್ಲಿ ಪ್ರದರ್ಶಿಸಿರುತ್ತಾರೆ.

ಎ) ಈ.ಕ.ರ.ಸಾ.ಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಕುಂದು ಕೊರತೆಗಳ ವಿಭಾಗವನ್ನು ಸ್ಥಾಪಿಸಲಾಗಿದೆ. ಮತ್ತು ಕುಂದುಕೊರತೆಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ನಿಯಮಿತವಾಗಿ ಪರಿಶೀಲಿಸಲಾಗುತ್ತದೆ.

ಏ) ಗಾಯಾಳುಗಳಾದ ಪ್ರಯಾಣಿಕರಿಗೆ ಈ ಕೆಳಗಿನಂತೆ ಪರಿಹಾರ ಧನವನ್ನು ಕೊಡಲಾಗುವುದು.

- ಕಣ್ಣಿನ ದೃಷ್ಟಿ ಕಳೆದುಕೊಂಡಲ್ಲಿ ( ಎರಡು ಕಣ್ಣುಗಳು ): ರೂ.1,00,000/-
- ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡಲ್ಲಿ : ರೂ.50,000/-
- ಮೊಳಕಾಲು ಕಳೆದುಕೊಂಡಲ್ಲಿ : ರೂ.50,000/-
- ಪಾದ ಕಳೆದುಕೊಂಡಲ್ಲಿ : ರೂ.50,000/-
- ತೋರ ಬೆರಳು ಕಳೆದುಕೊಂಡಲ್ಲಿ : ರೂ.15,000/-
- ಹೆಬ್ಬೆರಳು ಕಳೆದುಕೊಂಡಲ್ಲಿ : ರೂ.15,000/-

**V. ಕಾಯ್ದಿರಿಸಿದ ಆಸನಗಳನ್ನು ಅಕ್ರಮಿಸಿಕೊಂಡಲ್ಲಿ ವಿಧಿಸುವ ದಂಡ:**

ಸಂಸ್ಥೆಯ ವಾಹನಗಳಲ್ಲಿ ಮಹಿಳೆಯರಿಗೆ, ಅಂಗವಿಕಲರಿಗೆ, ಅಂಧರಿಗೆ ಮತ್ತು ಹಿರಿಯ ನಾಗರಿಕರಿಗೆ ಮೀಸಲಿರಿಸಿದ ಆಸನಗಳನ್ನು ಉಪಯೋಗಿಸಬಾರದು. ಇದನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಸಂಬಂಧಪಟ್ಟ ಪ್ರಯಾಣಿಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ದಂಡ ವಿಧಿಸುವ ಅಧಿಕಾರವನ್ನು ಪ್ರಾದೇಶಿಕ ಸಾರಿಗೆ ಸಿಬ್ಬಂದಿ/ಪೋಲಿಸ್ ಸಿಬ್ಬಂದಿಯವರಿಗೆ ಇರುತ್ತದೆ.

**W. ಉತ್ತಮ ಸೇವೆ ಒದಗಿಸಲು ನಮ್ಮೊಂದಿಗೆ ಸಹಕರಿಸಿ:**

**<u>ಪ್ರಯಾಣಿಕರು ಮಾಡಬೇಕಾದವುಗಳು:</u>**

- ಈ.ಕ.ರ.ಸಾ.ಸಂಸ್ಥೆಯು ರಾಜ್ಯ ಸರ್ಕಾರದ ಒಂದು ಉದ್ಯಮ ಈ.ಕ.ರ.ಸಾ.ಸಂಸ್ಥೆಯ ವಾಹನಗಳಲ್ಲಿ ಪ್ರಯಾಣಿಸುವ ಮೂಲಕ ಪೋಷಿಸಿ ನಿಮಗೆ ಇನ್ನೂ ಉತ್ತಮ ಸೇವೆ ನೀಡಲು ಸಂಸ್ಥೆಗೆ ನೆರವಾಗಿ.
- ದಯ ಮಾಡಿ ಟಿಕೇಟ್‌ಗಳನ್ನು ಖರೀದಿಸಿ, ತಾವು ಖರೀದಿಸಿದ ಟಿಕೇಟ್‌ಗಳನ್ನು ಪ್ರಯಾಣದ ಕೊನೆಯವರೆಗೆ ಹಾಳು ಮಾಡದೇ ಇಟ್ಟುಕೊಂಡು ಪ್ರಯಾಣ ಮುಗಿದ ನಂತರ ಹರಿದು ಹಾಕಿ, ಟಿಕೇಟ್‌ರಹಿತ ಪ್ರಯಾಣಕ್ಕೆ ಪ್ರಯಾಣದ 10 ಪಟ್ಟು ದಂಡ ಇಲ್ಲವೆ ರೂ. 500/- ಗಳ (ಯಾವುದು ಕಡಿಮೆಯೋ ಅದನ್ನು) ದಂಡ ವಿಧಿಸಲಾಗುವುದು.
- ಸರಿಯಾದ ಚಿಲ್ಲರೆ ನೀಡಿ ಟಿಕೇಟ್ ಖರೀದಿಸಿದ ಟಿಕೇಟ್‌ನ ಮೌಲ್ಯವನ್ನು ಮರು ಪರಿಶೀಲಿಸಿ.
- ಬಸ್ ನಿಲುಗಡೆಗಳಲ್ಲಿ ಸಾಲಾಗಿ ನಿಲ್ಲುವ ಪದ್ಧತಿ ಅನುಸರಿಸಿ ದಯಮಾಡಿ ಇಳಿಯುವ ಪ್ರಯಾಣಿಕರಿಗೆ ಮೊದಲು ಇಳಿಯಲು ಅವಕಾಶ ಮಾಡಿ ಕೊಡಿ.
- ಮಹಿಳೆಯರು ಮತ್ತು, ಅಂಗವಿಕಲರು, ಹಿರಿಯ ನಾಗರಿಕರು ಮತ್ತು ಅಂಧರಿಗಾಗಿಯೇ ಮೀಸಲಿರಿಸಿದ ಆಸನಗಳನ್ನು ಅವರಿಗೆ ಬಿಟ್ಟುಕೊಡಿ.
- ಈ.ಕ.ರ.ಸಾ.ಸಂಸ್ಥೆಯ ವಾಹನಗಳು ಸಾರ್ವಜನಿಕರ ಆಸ್ತಿ ಅವುಗಳನ್ನು ದಯಮಾಡಿ ರಕ್ಷಿಸಿ ಹಾಳು ಮಾಡಲು ಅವಕಾಶ ಕೊಡಬೇಡಿ.

- ಬಸ್ ಮತ್ತು ಬಸ್ ನಿಲ್ದಾಣಗಳನ್ನು ಸ್ವಚ್ಛವಾಗಿ ಹಾಗೂ ನಿರ್ಮಲವಾಗಿಡಲು ಸಹಕರಿಸಿ.
- ನಿಮ್ಮ ಪ್ರಯಾಣ ಸುಖಮಯವಾಗಿರಲು ಕಡಿಮೆ ಲಗೇಜ್‌ಗಳನ್ನು ಕೊಡೊಯ್ಯಿರಿ 20 ಕಿ.ಲೋಗಳಷ್ಟು ಲಗೇಜ್‌ನ್ನು ಉಚಿತವಾಗಿ ತೆಗೆದುಕೊಂಡು ಪ್ರಯಾಣಿಸಲು ಅವಕಾಶವಿದೆ. ನಿರ್ವಾಹಕರು ಲಗೇಜ್ ಚಾರ್ಟನ್ನು ಹೊಂದಿರುತ್ತಾರೆ.
- ಈ.ಕ.ರ.ಸಾ.ಸಂಸ್ಥೆಯ ಚಾಲಕ/ನಿರ್ವಾಹಕರು ಊಟ/ಉಪಹಾರಗಳಿಗೆ ಆದಷ್ಟು ಮಟ್ಟಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಹಾಗೂ ಪರವಾನಿಗೆ ಪಡೆದ ಮಾರ್ಗ ಮಧ್ಯ ಹೊಟೇಲ್‌ಗಳು/ಡಾಭಾಗಳಲ್ಲಿ ನಿಲ್ಲಿಸಲು ತಿಳಿಸಿ.
- ನಿಮ್ಮ ಲಗೇಜ್‌ಗಳಿಗೆ ಲಗೇಜ್ ಟಿಕೇಟ್‌ಗಳನ್ನು ಪಡೆದು ದಂಡ ತಪ್ಪಿಸಿಕೊಳ್ಳಿ.
- ನಿಮ್ಮ ಅನುಕೂಲ ಹಾಗೂ ಮಿತವ್ಯಯಕ್ಕೆ ಸೀಜನ್ ಟಿಕೇಟ್‌ಗಳನ್ನು ಪಡೆಯಿರಿ.
- ನಿಮ್ಮ ಸುರಕ್ಷಿತ ಪ್ರಯಾಣಕ್ಕಾಗಿ ಮೋಟಾರು ವಾಹನಗಳ ಕಾಯ್ದೆ ಹಾಗೂ ನಿಯಮಾವಳಿ ಅಡಿಯಲ್ಲಿ ಬರುವ ಸೂತ್ರಗಳನ್ನು ಪಾಲಿಸಿ.

**13.ಪ್ರಯಾಣಿಕರು ಮಾಡಬಾರದ ಅಂಶಗಳು:**

- ಟಿಕೇಟ್ ಖರೀದಿಸದೇ ಪ್ರಯಾಣಿಸಬೇಡಿ.
- ಬಸ್‌ಗಳಲ್ಲಿ ಹಾಗೂ ಬಸ್ ನಿಲ್ದಾಣಗಳಲ್ಲಿ ಧೂಮಪಾನ ನಿಷೇದಿಸಲಾಗಿದೆ. ದಯಮಾಡಿ ಬಸ್‌ಗಳಲ್ಲಿ ಹಾಗೂ ಬಸ್ ನಿಲ್ದಾಣಗಳಲ್ಲಿ ಧೂಮಪಾನ ಮತ್ತು ತಂಬಾಕು/ಗುಟಕಾ ಜಗೆಯುವುದನ್ನು ಮಾಡಬೇಡಿ ಹಾಗೂ ನಿಮ್ಮ ಸಹ ಪ್ರಯಾಣಿಕರು ಇದನ್ನು ಮಾಡದಿರುವಂತೆ ನೋಡಿಕೊಳ್ಳುವುದು.
- ಮದ್ಯಪಾನ ಮಾಡಿ ಪ್ರಯಾಣ ಮಾಡಬೇಡಿ, ಯಾವುದೇ ಪ್ರಯಾಣಿಕರು ಮದ್ಯಪಾನ ಮಾಡಿ ತನ್ನ ಸಹ ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸುವುದು ಇಲ್ಲವೇ ಕಿರಿ ಕಿರಿ ಮಾಡಿ ತೊಂದರೆ ನೀಡುತ್ತಿರುವುದು ಕಂಡು ಬಂದಲ್ಲಿ ಅಂತಹ ಪ್ರಯಾಣಿಕರನ್ನು ಕೆಳಗಿಳಿಸಲು ಈ.ಕ.ರ.ಸಾ.ಸಂಸ್ಥೆಗೆ ಅಧಿಕಾರವಿರುತ್ತದೆ.
- ನಿಷೇದಿಸಿರುವ ಪದಾರ್ಥಗಳನ್ನು ಮತ್ತು ಸ್ಫೋಟಕ್ ವಸ್ತುಗಳನ್ನು ಬಸ್‌ನಲ್ಲಿ ತೆಗೆದುಕೊಂಡು ಹೋಗಬೇಡಿ
- ಪ್ರಯಾಣದ ಕೊನೆಯಲ್ಲಿ ನಿಮ್ಮ ಪ್ರಯಾಣದ ಟಿಕೇಟ್‌ಗಳನ್ನು ಬಸ್‌ನ ನಿರ್ವಾಹಕರಿಗೆ/ಚಾಲಕ ಅಥವಾ ಇತರೆ ಪ್ರಯಾಣಿಕರಿಗೆ ಕೊಡಬೇಡಿ.
- ಚಾಲನಾ ಸಮಯದಲ್ಲಿ ಚಾಲಕರನ್ನು ಮಾತುಕತೆಗೆ ಇಳಿಯುವ ಮೂಲಕ ಏಕಾಗ್ರತೆಗೆ ಭಂಗ ಉಂಟು ಮಾಡಬೇಡಿ, ಏಕಾಗ್ರತೆಯನ್ನು ತಪ್ಪಿಸುವ ಮೂಲಕ ಅಪಘಾತಗಳಿಗೆ ಅವಕಾಶವಿದೆ.
- ಬಸ್ ನಿಲ್ದಾಣಗಳಲ್ಲಿ ಬಿಕ್ಷೆ ಬೇಡುವುದನ್ನು ಪ್ರೋತ್ಸಾಹಿಸಬೇಡಿ
- ಟಿಕೇಟ್ ರಹಿತ ಪ್ರಯಾಣದ ಬಗ್ಗೆ ನಿಮ್ಮನ್ನು ರಕ್ಷಿಸಲು ಯಾರಾದರು ಆಶ್ವಾಸನೆ ನೀಡಿದಲ್ಲಿ ಅದನ್ನು ನಂಬಬೇಡಿ.
- ಬಸ್ ನಿಲ್ದಾಣಗಳಲ್ಲಿ ಮತ್ತು ವಾಹನಗಳಲ್ಲಿ ಉಗಳಬೇಡಿ.
- ಬಸ್‌ನ ಮೇಲ್ಛಾವಣಿ ಅಥವಾ ಬಸ್ ಮೆಟ್ಟಲಿನ ಮೇಲೆ ನಿಂತು ಪ್ರಯಾಣಿಸಬೇಡಿ.
- ಬಸ್‌ನಲ್ಲಿ ಪ್ರಯಾಣಿಸುವಾಗ ಕಿಟಕಿಯ ಹೊರಗಡೆ ನಿಮ್ಮ ತಲೆ ಅಥವಾ ಕೈ ಯನ್ನು ಚಾಚಬೇಡಿ.

**ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ನಿಮ್ಮ ಸುಖಕರ, ಆರಾಮದಾಯಕ ಮತ್ತು ಸುರಕ್ಷಿತ ಪ್ರಯಾಣವನ್ನು ಆಶಿಸುತ್ತದೆ.**